ಪಂಚಾಯಂತಿ ಆಗಿ ಪರಿವರ್ತಿತವಾಗಿದೆ. ಆದರೆ ಪುರಸಭೆಗಳನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸುವಾಗ ಜನಸಂಖ್ಯೆಯಂ ಪರಿಮಿತಿ ೧೨,೦೦೦. ಇದರಿಂದಾಗಿ ಕೇವಲ ಕೆಲವೇ ನೂರು ಹೆಚ್ಚಿಗೆ ಜನ ಇರುವ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು, ಸಾಲಿಗ್ರಾಮ ಪುರಸಭೆಗಳು ತೀರ ಗ್ರಾಮೀಣ ಪ್ರದೇಶದಲ್ಲಿದ್ದರೂ ಸಹಾ, ಪುರಸಭೆ ಎಂದೆನಿಸಿಕೊಳ್ಳುವ ಯಾವುದೇ ಲಕ್ಷಣಗಳಿಲ್ಲದಿದ್ದರೂ ಸಹಾ ಪುರಸಭೆಗಳಾಗಿಯೇ ಉಳಿದಿವೆ. ಈ ಅನ್ಯಾಯದ ವಿರುದ್ಧ ಜನ ಪ್ರತಿಭಟಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಮನವಿ ಸಲ್ಲಿಸಿವೆ. ಜಿಲ್ಲಾಧಿಕಾರಿಗಳು ವಿಭಾಗಾಧಿಕಾರಿಗಳೂ ಸಹಾ 'ವಿಶೇಷ ಪರಿಸ್ಥಿತಿ' ಎಂದು ಪರಿಗಣಿಸಿ ಬೈಂದೂರು, ಸಾಲಿಗ್ರಾಮಗಳನ್ನು ಮಂಡಲ ಪಂಚಾಯಿತಿಗಳಾಗಿ ಪರಿವರ್ತಿಸಲು ಶಿಫಾರಸು ಮಾಡಿರುತ್ತಾರಾಗಿ ತಿಳಿದು ಬಂದಿದೆ. ತೀರ ನ್ಯಾಯವಾದ, ಅವಶ್ಯಕವಾದ ಈ ಬೇಡಿಕೆಗಳನ್ನು ಮುಂದಿನ ಪುರಸಭಾ ಚುನಾವಣೆಗೆ ಮೊದಲೇ ಈಡೇರಿಸಿ ನ್ಯಾಯ ದೊರಕಿಸಿಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನೆ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಂತ್ರಿಗಳಿಗೆ ಈ ವಿಷಯವನ್ನು ಕೊಟ್ಟಿದ್ದಾರೆ. ನನಗೆ ಈಗತಾನೆ ಕೊಟ್ಟಿದ್ದಾರೆ. ಇದರ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.— ಇದು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು.— ನಾಳೆ ತೆಗೆದುಕೊಳ್ಳೋಣ. ಶ್ರೀ ಪ್ರಭಾಕರ ರಾಣೆ—ಗೈರುಹಾಜರಿ.

ಶ್ರೀ ವಿ. ಎಸ್. ಕೌಜಲಗಿ.— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿವಸ ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೆ. ಅದು ಬಂದಿಲ್ಲ.

ಅಧ್ಯಕ್ಷರು.— ನಾನು ನೋಡುತ್ತೇನೆ.

೫. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣ ನಿರ್ಣಯದ ಮೇಲಿನ ಚರ್ಚೆ

SRI M. MALLIKARJUNA KHARGE.— Sir, I beg to move that:-

"We the Members of the Karnataka Legislative Assembly assembled in this Session, beg leave to thank the Governor for the address delivered to the Members of the Legislature on 18th December 1989."

The question wos proposed

ಶ್ರೀ ಜಿ. ಎಸ್. ಶಿವನಂಜಪ್ಪ.— ಮಾನ್ಯ ಅಧ್ಯಕ್ಷರೆ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಮಂಡಿಸಿದ ವಂದನಾರ್ಪಣ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಅನುಮೋದಿಸಲಾಯಿತು)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸನ್ಮಾನ್ಯ ಅಧ್ಯಕ್ಷರೆ...

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈಗ ಪ್ಯಾನಲ್ ಆಫ್ ಛೇರ್ಮನ್ಸ್ ಆಗಿಲ್ಲ. ಆದ್ದರಿಂದ ತಾವು ಎದ್ದು ಹೋಗುವ ಹಾಗಿಲ್ಲ, ಕುಳಿತುಕೊಳ್ಳುವ ಹಾಗಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಈಗಿನ ಕಾರ್ಯಕ್ರಮವನ್ನು ಎಕ್ಸೆಪ್ಷನ್ ಮಾಡಿ ಒಂದು ಗಂಟೆ ಕಾಲ ಮಾನ್ಯ ಅಧ್ಯಕ್ಷರ ಸಲುವಾಗಿಯಾದರೂ ಅಡ್ಜರ್ನ್ ಮಾಡಬೇಕಾಗುತ್ತದೆ. ಇಲ್ಲದೇಹೋದರೆ ಬೇರೆ ಪ್ಯಾನಲ್ ಆಫ್ ಛೇರ್ಮನ್ಸ್ ಇಲ್ಲದೇ ಇರುವುದರಿಂದ ತಾವೊಬ್ಬರೇ ಸಾಯಂಕಾಲದವರೆಗೆ ಕುಳಿತಿರಬೇಕಾಗುತ್ತದೆ. ಆದ್ದರಿಂದ ಈ ಸಲಹೆಯನ್ನು ತಾವು ಒಪ್ಪಿ ಒಂದು ಗಂಟೆ ಕಾಲ ಸಭೆಯನ್ನು ಅಡ್ಜರ್ನ್ ಮಾಡಬೇಕೆಂದು ಹೇಳುತ್ತೇನೆ.

MR. SPEAKER.— Be thankful to the small mercies ಎಂದ ಹಾಗೆ ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡಿ ಮತ್ತೆ ೩-೦೦ ಗಂಟೆಗೆ ಸೇರೋಣ.

(ಸಭೆಯು ೩ ಗಂಟೆ ೪೦ ನಿಮಿಷಕ್ಕೆ ಮುಂದೆಲೆಸ್ಪು ಪುನಃ ೩-೨೦ ಗಂಟೆಗೆ ಸೇರಲು ನಿಶ್ಚಯಿಸಿತು)

The House reassembled again at 3.20 P.M.

(Hon'ble Speaker Sri S. M. KRISHNA in the Chair).

ANNOUNCEMENT

MR. SPEAKER.— Under Rule 9 of the Rules of Procedure and Conduct of Business in the Karnataka Legislative Assemblye I nominate the following Members to the Panel of Chairman for th current Session.

Sriyuths:

1) Smt. Suma Vasanth,
2) Blasius M. D'souza,
3) Smt. Nagamma Keshavamurthy,
4) Gurupadappa Nagmarpalli,
5) H. Ekantaiah,
6) A. M. Hindasgeri.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯಂದ ಮೇಲಿನ ಚರ್ಚೆ

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).— ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಗೌವರ್ನರ್ ಅಡ್ರೆಸ್ ಮೇಲೆ ಅವರು ಮಾಡಿದಂತಹ ಭಾಷಣಕ್ಕೆ ವಂದನೆಯುನ್ನು ಸಲ್ಲಿಸಬೇಕೆಂದು ಈ ಸದನದ ಸದಸ್ಯರ ಪತಿಯಿಂದ ನಾನು ರೆಸಲ್ಯೂಷನ್ ಅನ್ನು ಮೂವ್ ಮಾಡಿದ್ದೇನೆ...

(ಶ್ರೀ ಬಿ.ಎಸ್. ಯಡಿಯೂರಪ್ಪನವರು ವೆಲ್‌ನಿಂದ ಮಾತನಾಡುತ್ತಿದ್ದುದರಿಂದ ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಅವರು ಮಾತನಾಡಿದ್ದನ್ನು ರೆಕಾರ್ಡ್ ಮಾಡಲಿಲ್ಲ.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನೇಕ ಸಲ ಅವರಿಗೆ ಅವಕಾಶ ನೀಡಲಾಗಿದೆ.

ಶ್ರೀ ಸಿ. ಬೈರೇಗೌಡ.— ಅವಕಾಶ ಕೊಟ್ಟಿದ್ದರ ಬಗ್ಗೆ. .

ಅಧ್ಯಕ್ಷರು.— ಅವರು ಈಲ್ಡ್ ಆಗದಿದ್ದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಇವರು ಅದನ್ನು ಒಪ್ಪುತ್ತಿಲ್ಲ. ಇದರ ಅರ್ಥ ಏನು ಅಂದರೆ 'It is a tyranny of minority over the majority ಮೆಜಾರಿಟಿ ಜನರ ಮೇಲೆ ಇವರು ಒತ್ತಡ ತರುತ್ತಿದ್ದಾರೆ. ರೈತರ ಬಗ್ಗೆ ಆಸಕ್ತಿ ಯಾರಿಗೆ ಇಲ್ಲ. ನಮಗೂ ಇದೆ.

ಶ್ರೀ ಸಿ. ಬೈರೇಗೌಡ.— ನೀವು ಹೇಳಿದ್ದುದು ಮಾಡಿ ಎಂದು ನಾವು ಕೇಳುತ್ತಿರುವುದು. ನಾವು ಹೇಳಿದ್ದುದನ್ನು ನೀವು ಮಾಡಿ ಎಂದು ಕೇಳುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವರು ಸಹ ಹಿಂದೆ ಅಧಿಕಾರದಲ್ಲಿದ್ದವರು. ಒಂದೇ ದಿವಸದಲ್ಲಿ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದರೆ ಹೇಗೆ? ಇವೊತ್ತು, ನಾವು ಚರ್ಚೆಗೆ ಸಿದ್ಧ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದರೆ ಕೇಳುವುದಕ್ಕೆ ತಾವು ತಯಾರಿಲ್ಲ...

ಶ್ರೀ ಸಿ. ಬೈರೇಗೌಡ.— ವಿಶೇಷ ಚರ್ಚೆ ಆದ ಮೇಲೆ ವಿಶೇಷವಾದ ಉತ್ತರ ಕೊಡಬೇಕು. ಚರ್ಚೆಗೆ ನಾವು ತಯಾರಿದ್ದೇವೆ. ಚರ್ಚೆಯನ್ನು ಮಾಡಕೂಡದೆಂದು ನಾವು ಹೇಳಲಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ.— ರೈತರ ನಿಜವಾದ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿ...

(ಗೊಂದಲ)

ಅಧ್ಯಕ್ಷರು.— ನಾನು ಮಾನ್ಯ ಖರ್ಗೆಯವರನ್ನು ಕರೆದಿದ್ದೇನೆ. ಅವರು ಈಲ್ಡ್ ಆದರೆ ಮಾತ ನಿಮಗೆ ಅವಕಾಶ ಕೊಡುತ್ತೇನೆ. ಇಲ್ಲದಿದ್ದರೆ ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗಾಗಲೇ ಸಮಸ್ಯೆ ಬಗ್ಗೆ ಪ್ರಸ್ತಾಪವಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ನಾವು ಚರ್ಚೆ ಮಾಡೋಣ, ಸಮಗ್ರವಾದ ಚರ್ಚೆ ಮಾಡಿ ಅದಕ್ಕೆ ಉತ್ತರ ಸರಿಯಾಗಿ ಬರದಿದ್ದರೆ ಅಥವಾ ತೃಪ್ತಿ ತರದಿದ್ದರೆ ನೀವು ಈ ಕ್ರಮ ಮಾಡಿದರೆ ನಾವು ಒಪ್ಪಿಕೊಳ್ಳಬಹುದಿತ್ತು. ಆದರೆ ನೀವು ಉತ್ತರ ಕೇಳುವುದಕ್ಕೆ ತಯಾರಿಲ್ಲ ಎಂದರೆ ಹೇಗೆ?

SRI AZIZ SAIT.— Mr. Spaeker Sir, I am very surprised that a person of the status of Mr. Byregowda, who was a Minister he knows the norms and procedures as to how this issue could be taken up and how it could be tackled or solved. The Chief Minister has promised that after the debate and argument on this issue, he will come out with the reply. Does he really want to help the farmers or oppose the farmers. Why are you (Mr. Byregowda) mixing the politics in the farmers issue?

ಶ್ರೀ ಸಿ. ಬೈರೇಗೌಡ.— ತಾವು ಸದನವನ್ನು ಮುಂದೂಡಿದಾಗ ಇಲ್ಲಿರತಕ್ಕ ಸಮಸ್ಯೆಗಳಿಗೆ ಉತ್ತರ ಸಿಗುತ್ತದೆ, ಮಧುರ ವಾತಾವರಣ ಇಲ್ಲಿ ನಿರ್ಮಾಣ ಆಗುತ್ತದೆ ಎನ್ನತಕ್ಕ ಭರವಸೆ ಕೂಡ ನನಗೆ ಇತ್ತು...

(ಗೊಂದಲ)

ಶ್ರೀ ಸಿ. ಬೈರೇಗೌಡ,—ಈ ವಿಚಾರದಲ್ಲಿ ತಾವು ಮಾತುಕತೆಗೆ ಕರೆಯದೆ ನೀವು ಏನು ಹೇಳುತ್ತೀರಿ? ತಾವು ಯಾರನ್ನೂ ಕರೆಯದೆ ಯಾವುದೇ ರೀತಿಯ ಸಂಧಾನಕ್ಕೂ ಕೂಡ ಕರೆಯದೆ ಇಲ್ಲಿ ನಮ್ಮ ಸ್ನೇಹಿತರು ಯಥಾಪ್ರಕಾರ ವೆಲ್‌ನಲ್ಲಿ ಕುಳಿತುಕೊಂಡಿದ್ದರೂ ತಾವು ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗ ತಕ್ಕದ್ದು ಸರಿಯಲ್ಲ. ಆದ್ದರಿಂದ ತಾವು ಈಗಲಾದರೂ ಪ್ರಯತ್ನ ಪಟ್ಟು ಮಾತುಕತೆಗಾದರೂ ನಮ್ಮನ್ನು ಕರೆಯಬಹುದು.

ಅಧ್ಯಕ್ಷರು.— ಏನು ಪ್ರಯತ್ನ ಮಾಡಬೇಕು ಎಂದು ನೀವೇ ಹೇಳಬೇಕು.

ಶ್ರೀ ಸಿ .ಬೈರೇಗೌಡ.— ತಾವು ಪ್ರಯತ್ನ ಪಡುತ್ತೀರಿ, ತಮ್ಮ ಸಮ್ಮುಖದಲ್ಲಿ ಇದಕ್ಕೆ ಒಂದು ಪರಿಹಾರ ದೊರಕುತ್ತದೆ ಎನ್ನತಕ್ಕಂಥ ನಂಬಿಕೆ ನನಗೆ ಇತ್ತು. ಆದರೆ ತಾವು ಯಾರನ್ನೂ ಮಾತುಕತೆಗೆ ಕರೆಯಲಿಲ್ಲ.

ಅಧ್ಯಕ್ಷರು.—ಈ ಪ್ರಯತ್ನದಿಂದಲೇ ಅವರು ನಾಡಿದ್ದು ಸಾಯಂಕಾಲ ೪ ಗಂಟೆಗೆ ಇದರ ಬಗ್ಗೆ ಒಂದು ವಿಶೇಷ ಚರ್ಚೆಗೆ ಒಪ್ಪಿದರು. ೨೨ನೇ ತಾರೀಖು ಉತ್ತರ ಕೊಡುತ್ತೇನೆ ಎಂದು ಹೇಳಿದರು. ಅದರಿಂದ ಅವರಿಗೆ ಸಮಾಧಾನವಾಗದೇ ಹೋದರೆ ಈ ಸಮಸ್ಯೆಗೆ ಪರಿಹಾರ ಎಲ್ಲಿ ಸಿಗುತ್ತದೆ?

ಶ್ರೀ ಸಿ. ಬೈರೇಗೌಡ.— ಅದೆಲ್ಲಾ ಇಲ್ಲಿ ನಡೆದಿರತಕ್ಕಂಥ ವಿಚಾರ. ನಾನು ಹೇಳತಕ್ಕಂಥಾದ್ದು ಬೇರೆ ವಿಚಾರ,

ಅಧ್ಯಕ್ಷರು.— ಇನ್ನೇನಾದರೂ ಮೂಲಭೂತವಾದಂಥ ಡಿಸ್‌ಅಗ್ರಿಮೆಂಟ್ ಇದ್ದರೆ ಮಧ್ಯಸ್ಥಿಕೆ ಮಾಡಬಹುದಾಗಿತ್ತು. ಅಂತಹ ಮೂಲಭೂತವಾದಂಥ ವ್ಯತ್ಯಾಸಗಳು ನನಗೇನೂ ಕಾಣಲಿಲ್ಲ. ಇದರಲ್ಲಿ ಯಾರೂ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ ಎಂದು ನಿಮ್ಮ ಊಹೆ.

ಶ್ರೀ ಸಿ. ಬೈರೇಗೌಡ.— ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ ಎಂದು ನಮ್ಮ ಊಹೆ. ಏಕೆಂದರೆ ಇಲ್ಲಿ ಇದರ ಬಗ್ಗೆ ಒಂದು ವಿಶೇಷವಾದಂಥ, ಪ್ರತ್ಯೇಕವಾದಂಥ, ಚರ್ಚೆ ಆದಮೇಲೆ ಅದಕ್ಕೆ ಉತ್ತರ ಕೊಡಬೇಕು ಏತಕ್ಕೋಸ್ಕರ ಇಲ್ಲಿ ಚರ್ಚೆ ಮಾಡಬೇಕು? ಈಗ ಇರತಕ್ಕಂಥ ಸಮಸ್ಯೆಗೆ ಪರಿಹಾರ ವನ್ನು ಹುಡುಕಬೇಕು. ಸರ್ಕಾರ ಇದಕ್ಕೆ ಉತ್ತರ ಕೊಡುವುದರ ಮೂಲಕ ಪರಿಹಾರವನ್ನು ಕಂಡು ಹಿಡಿಯಬೇಕು. ಅವರ ವಾದವನ್ನು ಅವರು ಹೇಳಿದ್ದಾರೆ...

ಶ್ರೀ ಕೆ. ಹೆಚ್. ಹನುಮೇಗೌಡ.— ಅವರ ಸರ್ಕಾರ ಇದ್ದಾಗ ಏನೂ ಮಾಡಲಿಲ್ಲ. ನಾವು ಮಾಡುತ್ತೇವೆ. ಅವರದು ಬರೀ ದೊಂಬರಾಟ. ಜನ ಅವರನ್ನು ನಂಬುತ್ತಾರೆಯೇ ನಾಚಿಕೆಯಾಗು ತ್ತದೆ. ಸ್ವಾಮಿ...

(ಗೊಂದಲ)

ಶ್ರೀ ಸಿ. ಬೈರೇಗೌಡ.— ದೊಂಬರಾಟ ಗೊತ್ತಾಗುತ್ತದೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.— ನಾನು ವರದಿಗಾರರಿಗೆ ಸೂಚನೆ ಕೊಡುತ್ತೇನೆ. ಒಬ್ಬ ಸದಸ್ಯರಿಗಿಂತ ಹೆಚ್ಚು ಸದಸ್ಯರು ಏಕ ಕಾಲದಲ್ಲಿ ಮಾತನಾಡುತ್ತಾ ಇದ್ದರೆ ಅದ್ಯಾವುದನ್ನೂ ನೀವು ರಿಕಾರ್ಡ್ ಮಾಡಿಕೊಳ್ಳ ಬೇಡಿ.

ಶ್ರೀ ಸಿ. ಬೈರೇಗೌಡ.— ಮೊದಲು ತಾವು ಸಂಧಾನದ ದಾರಿಯನ್ನು ಅನುಸರಿಸಬೇಕು. ಈಗ ಇರತಕ್ಕಂಥ ಸಮಸ್ಯೆಗೆ ಯಾವುದಾದರೂ ಒಂದು ರೀತಿಯಲ್ಲಿ ಪರಿಹಾರವನ್ನು ತಾವು ದೊರಕಿಸಿಕೊಡ ಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಮನವಿ ಮಾಡಿಕೊಂಡಿದ್ದಾರೆ. ಅದೇ ರೀತಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರೂ ಕೂಡ ಮಾನ್ಯ ಯಡಿಯೂರಪ್ಪನವರಲ್ಲಿ ಮನವಿ ಮಾಡಿಕೊಂಡಿದ್ದಾರೆ. ತಾವೂ ಕೂಡ ಸ್ಪಷ್ಟವಾಗಿ ಹೇಳಿದ್ದೀರಿ. ನಾಳಿದ್ದು ಸಂಜೆ ೪ ಗಂಟೆಗೆ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರು ಹೇಳಿದ ಮೇಲೂ ವಿರೋಧ ಪಕ್ಷದ ನಾಯಕರು ಹೇಳಿದ ಮೇಲೂ ಸಭಾ ನಾಯಕರು ಹೇಳಿದ ಮೇಲೂ ಅವರು ಕೇಳದೇಹೋದರೆ ತಾವೇ ಒಂದು ತೀರ್ಮಾನಕ್ಕೆ ಬರಬೇಕು,

ಅಧ್ಯಕ್ಷರು.— ತಾವು ತಮ್ಮ ಭಾಷಣವನ್ನು ಮುಂದುವರಿಸಬಹುದು.

(ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದ ವೆಲ್‌ನಲ್ಲಿ ನಿಂತು ಮಾತ ನಾಡುತ್ತಿದ್ದರು)

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ, ಈಗ ಅವರು ಇಲ್ಲಿಗೆ ಬಂದು ೧೫೦ ಗಂಟೆ ಆಗಿದೆಯೋ ಇಲ್ಲವೋ ಆಗಲೇ ಇವರಿಗೆ ವಿನಾಶಕಾಲೇ ವಿಪರೀತ ಬುದ್ಧಿ ಬಂದುಬಿಟ್ಟಿತೇ.

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು.— ಮಾನ್ಯ ಬೈರೇಗೌಡರೇ ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಈಗಲೂ ಕೂಡ ಈ ವಿಚಾರವನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆ. ದಯವಿಟ್ಟು ತಾವು ಪ್ರಯತ್ನ ಮಾಡಬೇಕು ಎಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು.— ಬೈರೇಗೌಡರು ಈ ಸದನದ ಹಿರಿಯ ಸದಸ್ಯರು. ಅವರ ಮಾತಿಗೆ ಮನ್ನಣೆ ಕೊಡುತ್ತೇನೆ. ಮತ್ತೊಮ್ಮೆ ನನ್ನ ಸ್ನೇಹಿತರಿಗೆ ಹೇಳುತ್ತೇನೆ. ನಾಳಿದ್ದು ಸಾಯಂಕಾಲ ೪ ಗಂಟೆಗೆ ಈ ವಿಷಯವನ್ನು ಚರ್ಚೆ ಮಾಡೋಣ. ೨೨ನೇ ತಾರೀಖು ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ಇದರಿಂದ ತಾವು ಸಮಾಧಾನರಾಗಿ ನಿಮ್ಮ ನಿಮ್ಮ ಸ್ಥಾನಗಳಿಗೆ ದಯಮಾಡಿ ಮರಳಿ ಹೋಗಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸರ್ಕಾರದವರು ಏತಕ್ಕೆ ಇಷ್ಟು ಹಠ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ ಹಾಗೆ.

ಅಧ್ಯಕ್ಷರು.— ಮಾನ್ಯ ಬೈರೇಗೌಡರಿಗೆ ಸಮಾಧಾನವಾಯಿತೇ ?

ಶ್ರೀ ಸಿ. ಬೈರೇಗೌಡ.— ನನ್ನ ಸಲಹೆ ಏನೆಂದರೆ...

(ಗೊಂದಲ)

ಶ್ರೀ ಎಂ. ಮಹದೇವ್.— ಬೈರೇಗೌಡರಿಗೆ ಎಷ್ಟುಸಾರಿ ಅವಕಾಶ ಕೊಡುವುದು.

ಶ್ರೀ ಸಿ.ಬೈರೇಗೌಡ.—ಸದನವನ್ನು ಸ್ವಲ್ಪ ಹೊತ್ತು ಮುಂದೂಡಬೇಕೆಂದು ಸಲಹೆ ಕೊಡುತ್ತೇನೆ. ತಮ್ಮ ಕೊಠಡಿಯಲ್ಲಿ ಸಂಧಾನಕ್ಕೆ ಕರೆದು ಮಾತುಕತೆ ನಡೆಸುವುದು ಸೂಕ್ತವೆಂದು ಹೇಳುತ್ತೇನೆ. ಹೇಗಿದ್ದರೂ ಪ್ಯಾನಲ್ ಆಫ್ ಛೇರ್ಮನ್ ನಾಮಕರಣ ಮಾಡಲಾಗಿದೆ. ಅವರು ಬಂದು ಸದನವನ್ನು ನಡೆಸಿಕೊಂಡು ಹೋಗಬಹುದು.

ಅಧ್ಯಕ್ಷರು.— ತಮ್ಮ ಸಲಹೆಯನ್ನು ಪರಿಶೀಲಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).— ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಹಾಗೆ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸತಕ್ಕ ಚರ್ಚೆಯ ಮೇಲೆ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ಇವತ್ತು ನಾವೆಲ್ಲರೂ ಒಂದು ದೊಡ್ಡ ಚುನಾವಣೆಯನ್ನು ಎದುರಿಸಿ, ರಾಜ್ಯದಲ್ಲಿ ಹೊಸ ಸರ್ಕಾರ ಸ್ಥಾಪನೆಯಾಗಿದೆ. ಹೊಸ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳನ್ನು ರಾಜ್ಯಪಾಲರ ಮುಖಾಂತರ ಈ ಸದನಕ್ಕೆ ಮತ್ತು ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನತೆಗೆ ಈಗಾಗಲೇ ತಿಳಿಸಲಾಗಿದೆ.

(ಶ್ರೀಮತಿ ಸುಮಾ ವಸಂತರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಮೊನ್ನೆ ನಡೆದಂತ ಚುನಾವಣೆ ಐತಿಹಾಸಿಕ ಚುನಾವಣೆ. ಹಿಂದಿನ ಸರ್ಕಾರ ಯಾವರೀತಿಯಾಗಿ ವರ್ತನೆ ಮಾಡಿತು, ಅದು ಜನತೆಗೆ ಕೊಟ್ಟಂಥ ವಚನಗಳನ್ನು ಪಾಲನೆ ಮಾಡದೇ ಹೋದಾಗ, ಆ ಪಕ್ಷದವರನ್ನು ಜನ ತಿರಸ್ಕರಿಸಿ ಕಾಂಗ್ರೆಸ್ ಪಕ್ಷಕ್ಕೆ ಪುನಃ ಅಧಿಕಾರ ನಡೆಸುವಂತೆ ಮತ ಕೊಟ್ಟು ಕಳುಹಿಸಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ, ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಜನತೆಗೆ ಕೊಟ್ಟ ಮಾತುಗಳನ್ನು ನಡೆಸದೆ ಹೋದರೆ, ತಾವು ಹೇಳಿದಂಥ ಕೆಲಸವನ್ನು ಮಾಡದೇ ಹೋದರೆ, ಅವರಿಗೆ ಶಿಕ್ಷೆ ಕೊಡುವುದು ಜನರ ಕೈಯಲ್ಲಿದೆ ಎಂಬುದನ್ನು ಮಹಾಜನತೆ ಈ ಚುನಾವಣೆಯಲ್ಲಿ ತೋರಿಸಿಕೊಟ್ಟಿದೆ, ಮುಖ್ಯವಾಗಿ ಹಿಂದೆ ಏನೊಂದು ಸರ್ಕಾರ ಅಧಿಕಾರದಲ್ಲಿತ್ತು, ಆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರೂ, ಜನಗಳಿಗೆ ವಾಗ್ದಾನ ಕೊಟ್ಟಿದ್ದರೂ ಅವುಗಳನ್ನು ಪೂರೈಸಲಿಕ್ಕೆ ಆಗಲಿಲ್ಲ. ಅವರ ಆಡಳಿತಾವಧಿಯಲ್ಲಿ ಅನೇಕ ಲೋಪದೋಷಗಳನ್ನು ಜನರು ಕಂಡು ಹಿಡಿದು, ಶಿಕ್ಷೆಗೆ ಗುರಿ ಮಾಡಿದ್ದಾರೆಂದರೆ ತಪ್ಪಾಗಲಾರದು. ಇವೊತ್ತು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಧರಣಿ ಕುಳಿತಿದ್ದಾರೆ. ಮಾನ್ಯ ರಾಜ್ಯಪಾಲರು ನಿನ್ನೆ ನಾಲ್ಕು ಗಂಟೆಗೆ ತಮ್ಮ ಭಾಷಣವನ್ನು ಕೊಟ್ಟಿದ್ದಾರೆ. ಇವತ್ತು ಸದನದ ತನ್ನ ಕಾರ್ಯಕಲಾಪವನ್ನು ಪ್ರಾರಂಭ ಮಾಡಿದೆ. ಅಧ್ಯಕ್ಷರೆ, ಕೆಲವೊಂದು ಪ್ರೋಗ್ರಾಮ್‌ಗಳ ಬಗ್ಗೆ ಇನ್ನೂ ಕೂಡ ಸ್ಪಷ್ಟವಾದಂಥ ಒಂದು ಹೇಳಿಕೆ ಸರ್ಕಾರದ ವತಿಯಿಂದ ಬಾರದೇ ಇದ್ದರೂ ಮುಂದೆ ಬರತಕ್ಕ ಬಡ್ಜಟ್ ಭಾಷಣದಲ್ಲಿ ರೈತರ ಬಗ್ಗೆ ಕೊಡತಕ್ಕ ಸವಲತ್ತುಗಳ ವಿಚಾರದಲ್ಲಿ ಯಾವ ಯಾವ ಕನ್‌ಸೇಷನ್ ಕೊಡಬಹುದು ಎನ್ನುವುದನ್ನು ಹೇಳಬಹುದು. ಇವೊತ್ತೇ ತಕ್ಷಣ ಎಲ್ಲಾ ಪರಿಹಾರವಾಗಬೇಕು, ರೈತರ ಸಾಲ ಮನ್ನಾ ಆಗಬೇಕು, ಇವೊತ್ತೇ ಆಶ್ವಾಸನೆ ಕೊಡಿ ಎಂದು ಹೇಳಿ ಹಠ ಹಿಡಿದುಕೊಂಡು ಧರಣಿ ಏನು ಕುಳಿತಿದ್ದಾರೆ, ಈ ಕೆಲಸವನ್ನು ಯಾರಿಗೂ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಅವರಿಗೂ ಸಹ ಗೊತ್ತಿದೆ. ಈಗ ಕೇಂದ್ರದಲ್ಲಿ ಅವರ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ. ಮಾನ್ಯ ದೇವಿಲಾಲ್ ಅವರು ಮೊನ್ನೆ ಉಪ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಮೊನ್ನೆ ಮದ್ರಾಸ್‌ನಲ್ಲಿ ನಮ್ಮ ಎಲ್ಲಾ ಕಡೆ ರೈತರ ಸಾಲ ಮನ್ನಾ ಮಾಡುತ್ತೇನೆಂದು ಮಾತು ಕೊಟ್ಟುಬಿಟ್ಟಿರು. ಅವರು ಹೇಳಿದಂಥ ಮಾತಿನ ಬಗ್ಗೆ ಇವೊತ್ತು ಪುನಃ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು, ರಿಸರ್ವ್ ಬ್ಯಾಂಕಿನವರು ಪುನರ್‌ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಯಾವುದೇ ಮಾತನ್ನು ಹೇಳಿದ ಮೇಲೆ ಅದನ್ನು ನಡೆಸಿಕೊಡಲಿಕ್ಕೆ ಆಗದೇ ಹೋದರೆ ಪ್ರಯೋಜನ ಆಗುವುದಿಲ್ಲ. ಅದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅವರ ಬೇಡಿಕೆ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಾರೆ. ಇವೊತ್ತು ಮಾನ್ಯ ಸದಸ್ಯರು ಯಾವ ಯಾವ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದಾರೆ ಅದರ ಬಗ್ಗೆ ಚಿಂತನೆ ಮಾಡಿ ಅದರ ಬಗ್ಗೆ ಸರಿಯಾದಂಥ ಒಂದು ಉಪಾಯವನ್ನು ಹುಡುಕುತ್ತೇನೆಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ.— ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ ಕೇಂದ್ರ ಸರ್ಕಾರದ ಉಪ ಪ್ರಧಾನಿ ದೇವಿಲಾಲ್‌ರವರು ರೈತರ ಎಲ್ಲಾ ಸಾಲವನ್ನು ವಜಾ ಮಾಡುತ್ತೇವೆಂದು ಹೇಳಿದಮೇಲೆ ಅರ್ಥ ಶಾಖೆ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ಉಪ ಪ್ರಧಾನಿಯವರು ಏನು ಹೇಳಿದ್ದಾರೆ ಆದ ರಂತೆ ನಡೆದುಕೊಳ್ಳಲಿಕ್ಕೆ ಕೇಂದ್ರಸರ್ಕಾರ ಒಪ್ಪಿಕೊಂಡಿದೆ. ಆದರೆ ಯಾವ ಯಾವ ರೀತಿಯಲ್ಲಿ ವಜಾ ಮಾಡಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತಿದೆ. ಕುಶಲಕಾರ್ಮಿಕರಿಗೆ, ಸಣ್ಣ ರೈತರಿಗೆ ಹತ್ತು ಸಾವಿರ ರೂಪಾಯಿವರೆಗೆ ಸಾಲ ಮತ್ತು ಬಡ್ಡಿ ಮನ್ನಾ ಮಾಡಲಿಕ್ಕೆ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಎಲ್ಲಾ ರೈತರ ಸಾಲ ವಜಾ ಮಾಡಿದರೆ ಹದಿನಾರುಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ ಇದನ್ನು ಮಾಡಲಿಕ್ಕೆ ಆಗುವುದಿಲ್ಲ. ಎನ್ನುವ ವಿಚಾರವನ್ನು ಹಣಕಾಸು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ.— ಸಾಲ ವಜಾ ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ವಿಚಾರವನ್ನು ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಜನತಾದಳದ ಆಫೀಸಿನಲ್ಲಿ ನಾವು ಎಷ್ಟರಮಟ್ಟಿಗೆ ಕನ್‌ಸೇಷನ್ ಕೊಡಬಹುದು ಎನ್ನುವ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಅದರ ಬಗ್ಗೆ ದಯಮಾಡಿ ತಿಳಿದುಕೊಳ್ಳಬೇಕು, ಬಾಂಬೆ ಆಫೀಸಿನಲ್ಲಿ ಈ ಪ್ರಶ್ನೆಯ ಬಗ್ಗೆ ಪುನಃ ಕೇಳಿದಾಗ ಹತ್ತುಸಾವಿರ ರೂಪಾಯಿಯೊಳಗೆ ಸಾಲ ಇದ್ದವರಿಗೆ ರಿಲೀಫ್ ಕೊಡಬೇಕೋ ಅದ ಕ್ಕಿಂತಲೂ ಹೆಚ್ಚು ಇದ್ದವರಿಗೆ ರಿಲೀಫ್ ಕೊಡಬೇಕೋ ಇದರ ಬಗ್ಗೆ ಯೋಚನೆ ಮಾಡಿ ಪುನಃ ಸ್ಟೇಟ್ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಉಪ ಪ್ರಧಾನಿಯವರು ಹೇಳು ವುದು ಒಂದು, ಹಣಕಾಸಿನ ಮಂತ್ರಿಗಳು ಹೇಳುವುದು ಒಂದು ಈ ರೀತಿಯಾಗಿದೆ. ಆ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ರೈತರ ಸಮಸ್ಯೆ ಏನಿದೆ ಅದನ್ನು ಚರ್ಚೆ ಮಾಡೋಣ, ಅದಕ್ಕೆ ಒಂದು ಪರಿಹಾರ ಕಂಡುಹಿಡಿಯೋಣ ಎಂದು ಹೇಳಿದ್ದಾರೆ. ಅಷ್ಟು ಹೇಳಿದರೂ ಸಹ ಇವೊತ್ತಿನ ದಿವಸ ಯಡಿಯೂರಪ್ಪನವರು ಧಿಡೀರನೆ ಇಲ್ಲಿಗೆ ಬಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ರೈತರ ಬಗ್ಗೆ ಅವರೊಬ್ಬರಿಗೆ ಕಳಕಳಿ ಇದೆ ಎಂದು ಅಲ್ಲ. 220 ಜನ ಏನು ಆಯ್ಕೆಯಾಗಿ ಬಂದಿದ್ದಾರೆ ಅವರೆಲ್ಲರಿಗೂ ರೈತರ ಬಗ್ಗೆ ಕಳಕಳಿ ಇದೆ. ರೈತರ ಪರವಾಗಿ ಬಂದಿರತಕ್ಕವರು ಇದ್ದಾರೆ. ಅವರಿಗೆ ಕೆಲವೊಂದು ಆಶ್ವಾಸನೆಗಳನ್ನು ಕೊಟ್ಟು ಬಂದವರು ಇದ್ದಾರೆ. ನಾವು ಸಹ ಮೊದಲಿಂದಲೂ ಕೇಳು ತ್ತಿದ್ದೆವು. ಮೂರು ವರ್ಷ ಕೇಳಿದರೂ ಅವರಿಗೆ ಮಾಡಲಿಕ್ಕೆ ಆಗಲಿಲ್ಲ, ಆರು ವರ್ಷ ಆದರೂ ಅವರು ಮಾಡಲಿಕ್ಕೆ ಆಗಿಲ್ಲಿಲ್ಲವಾದ್ದರಿಂದ ಅವರು ಮನೆಗೆ ಹೋಗಬೇಕಾಯಿತು.

ಶ್ರೀ ಬಸವರಾಜ್‌ರಾಯರೆಡ್ಡಿ.— ರೈತರ ಸಾಲ ಮನ್ನಾ ಮಾಡಿದಂಥ ಸರ್ಕಾರ ಎಂದರೆ ಹೆಗಡೆ ನಾಯಕತ್ವದ ಸರ್ಕಾರ. ಎಂಭತ್ತೈದು ಕೋಟಿ ರೂಪಾಯಿಗಳ ಪರಿಹಾರ ಕೊಟ್ಟಂಥ ಸರ್ಕಾರ ಅಂದರೆ ಹೆಗಡೆ ನಾಯಕತ್ವದ ಸರ್ಕಾರ.

ಶ್ರೀ ಎಂ. ಮಹದೇವ್.— ನಿಜವಾಗಿಯೂ ನೀವು ರೈತರಿಗೆ ಸಹಾಯ ಮಾಡಿದ್ದರೆ ನಿಮಗೆ ಈ ಕರ್ನಾಟಕದಲ್ಲಿ ಏತಕ್ಕೆ ಜನರು ಬಹುಮತವನ್ನು ಕೊಡಲಿಲ್ಲ.? ನಿಜವಾಗಿ ರೈತರಿಗೆ ಏನಾದರೂ ಸಹಾಯ ವಾಗಿದ್ದರೆ ಅದು ಮಾನ್ಯ ಗುಂಡೂರಾಯರ ಕಾಲದಲ್ಲಿ ಮಾತ್ರ. ಅವರು ಪಂಪ್‌ಸೆಟ್ಟುಗಳಿಗೆ ರಿಯಾಯಿತಿಯನ್ನು ಕೊಟ್ಟರು. ಆದರೆ ನೀವು ರೈತರಿಗೆ ಅನ್ಯಾಯವನ್ನು ಮಾಡಿದಿರೆಂದು ಆ ರೈತರು ಇವೊತ್ತು ನಿಮ್ಮನ್ನು ಮನೆಗೆ ಕಳುಹಿಸಿದ್ದಾರೆ.

ಛೇರ್ಮನ್.— ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ವಿರೋಧಪಕ್ಷದ ಸದಸ್ಯರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇಲಾಖೆಯ ಬಗ್ಗೆ ಮುಂದೆ ಮಾತನಾಡು ವುದಕ್ಕೆ ಅವರಿಗೆ ಬಹಳ ಅವಕಾಶವಿದೆ. ಆಗ ಸಾಕಷ್ಟು ಹೇಳಬಹುದು. ಹೇಳುವುದಕ್ಕೆ ಅವರಿಗೆ ಶಕ್ತಿ ಇದೆ...

ಶ್ರೀ ಬಸವರಾಜ ರಾಯರೆಡ್ಡಿ.— ಆನೆಯನ್ನು ಹೊಡೆದು ಓಡಿಸುವುದಕ್ಕೆ ಒಂದು ಇರುವೆ ಸಾಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮಗೆ ಮಾತನಾಡುವುದಕ್ಕೆ ಮುಂದೆ ಸಾಕಷ್ಟು ಅವಕಾಶವಿದೆ. ಆದ್ದರಿಂದ ಈಗ ನಾನು ಮಾತನಾಡುವುದಕ್ಕೆ ಸ್ವಲ್ಪ ಅವಕಾಶವನ್ನು ಕೊಡಿ. ಮಾಜಿ ಮುಖ್ಯ ಮಂತ್ರಿಗಳಾದ ಹೆಗಡೆಯವರು ಏನೇನು ಹಗರಣವನ್ನು ಮಾಡಿದ್ದಾರೆ, ಇನ್ನೂ ಏನೇನು ಮಾಡಿ ದ್ದಾರೆಂಬುದನ್ನೆಲ್ಲಾ ಹೇಳಿಕೊಳ್ಳುವುದಕ್ಕೆ ನಿಮಗೆ ಅವಕಾಶವಿದೆ.

ಶ್ರೀ ಎಂ.ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷಿಣಿಯವರೆ, ಮಾಜಿ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ಹೆಸರನ್ನು ಮಾನ್ಯ ಖರ್ಗೆಯವರು ಹೇಳಿರುವುದರಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ,...

ಛೇರ್ಮನ್.— ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷಿಣಿಯವರೆ, ಈಗಾಗಲೇ ನಾನು ಹೇಳಿದಂತೆ ಇವೊತ್ತು ರಾಜ್ಯದ ಜನತೆ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಮ್ಯಾಂಡೇಟ್ ಕೊಟ್ಟಿದ್ದಾರೆ ಆದ್ದರಿಂದ ನಾವು ಅವರಿಗೆ ಕೊಟ್ಟಂಥ ಆಶ್ವಾಸನೆಯನ್ನು ಪೂರ್ತಿಗೊಳಿಸಿಕೊಡಬೇಕೆಂದು ನಮ್ಮ ಸರ್ಕಾರ ಇಚ್ಛಿಸಿದೆ. ಮತ್ತು ಈ ದಿಸೆಯಲ್ಲಿ ನಮ್ಮ ಸರ್ಕಾರ ಪ್ರಯತ್ನವನ್ನೂ ಮಾಡುತ್ತಿದೆ. ಇವತ್ತು ಒಂದು ದಿವಸದಲ್ಲೇ ಸಭೆ ಸೇರಿ ಎಲ್ಲಾ ತೀರ್ಮಾನವನ್ನೂ ಕೈಗೊಳ್ಳುತ್ತೇವೆಂದು ನಾನು ಹೇಳುವುದಿಲ್ಲ. ಮುಂದೆ ನಾವು ಏನು ಮಾಡುತ್ತೇವೆಂಬುದನ್ನು ನೀವು ಕಾದು ನೋಡಬೇಕು. ನಾವು ಮಂಡಿಸುವ ಮುಂಗಡ ಪತ್ರವನ್ನು ನೋಡಬೇಕು. ನಮ್ಮ ಕಾರ್ಯಕ್ರಮಗಳು ಯಾವ ರೀತಿ ಇರುತ್ತವೆಂಬುದನ್ನು ನೀವು ನೋಡಬೇಕು, ಮತ್ತು ಅವುಗಳನ್ನು ನಾವು ಯಾವರೀತಿ ಇಂಪ್ಲಿಮೆಂಟ್ ಮಾಡುತ್ತೇವೆ ಎಂಬುದನ್ನೂ ನೀವು ಕಾದು ನೋಡಬೇಕಾಗುತ್ತದೆ.

ಕೊಟ್ಟಂಥ ಆಶ್ವಾಸನೆಗಳನ್ನು ಇವರು ಯಾವರೀತಿ ಈಡೇರಿಸುತ್ತಾರೆ, ಅಥವಾ ಈಡೇರಿಸುತ್ತಾರೋ, ಇಲ್ಲವೋ ಎಂಬುದನ್ನೂ ಕಾದು ನೋಡಿ. ನೀವು ಕೇಳುವುದನ್ನೆಲ್ಲಾ ಒಂದೇ ದಿನದಲ್ಲಿ ಕೊಡುವುದಕ್ಕೆ ಇದೇನೂ ಅಲ್ಲಾವುದ್ದೀನ್ ಅದ್ಭುತ ದೀಪವೇನೂ ಅಲ್ಲವಲ್ಲ; ತಮಗೂ ಗೊತ್ತಿದೆ. ಈ ಸದನದಲ್ಲಿ ಸದಸ್ಯರಿಂದ ರಚಿತವಾದಂಥ ಭರವಸೆಗಳ ಸಮಿತಿ ಎಂದು ಒಂದು ಸಮಿತಿ ಇತ್ತು. ಹೋದ ಸರ್ಕಾರ ೮೮-೮೯ರವರೆಗೆ ಸುಮಾರು ೨೫೬೨ ಆಶ್ವಾಸನೆಗಳನ್ನು ಕೊಟ್ಟಿತ್ತು. ಆ ಪೈಕಿ ಎಷ್ಟು ಆಶ್ವಾಸನೆಗಳನ್ನು ಪೂರೈಸಿದೆ ಎಂದರೆ ನನಗೆ ತಿಳಿದಮಟ್ಟಿಗೆ ಕೇವಲ ೧೦ ಪರ್ಸೆಂಟ್ ಮಾತ್ರ. ಹಿಂದಿನ ಮಂತ್ರಿಗಳಾಗಿದ್ದ ದೇಶಮುಖ್‌ರವರೇ ಇದರ ಬಗ್ಗೆ ಒಂದು ರಿಪೋರ್ಟ್‌ನ್ನು ಸದನಕ್ಕೆ ಸಬ್ಮಿಟ್ ಮಾಡಿದ್ದರು. ಮಾನ್ಯ ಬಣಕಾರ್‌ರವರಿಗೆ ಇದು ಬಹಳ ಚೆನ್ನಾಗಿ ಗೊತ್ತಿದೆ. ರೆವಿನ್ಯೂ ಎಕ್ಸ್‌ಪೆಂಡಿಚರ್ ಸ್ಟೇಟ್‌ಮೆಂಟ್, ಪಬ್ಲಿಕ್ ಅಕೌಂಟ್ಸ್ ಕಮಿಟಿ, ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ಇವುಗಳ ಬಗ್ಗೆ ಆಗಿಂದಾಗ್ಗೆ ಸ್ಟೇಟ್‌ಮೆಂಟನ್ನು ಕೊಡತಕ್ಕ ಅಭ್ಯಾಸವನ್ನು ಅವರು ಹಾಕಿಕೊಂಡಿದ್ದರು, ಮೊನ್ನೆ ಅಷ್ಯೂರೆನ್ಸ್ ಕಮಿಟಿಯ ವಿಚಾರ ಬಂದಾಗ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಕಳೆದಸಾರಿ ಸುಮಾರು ೨ ಸಾವಿರಕ್ಕೂ ಹೆಚ್ಚು ಏನು ಆಶ್ವಾಸನೆಗಳನ್ನು ಕೊಟ್ಟಿದ್ದರು, ಅದರಲ್ಲಿ ೧೦ ಪರ್ಸೆಂಟ್ ಕೂಡ ಸರ್ಕಾರ ಈಡೇರಿಲ್ಲವೆಂದು ಅವರು ಹೇಳಿದ್ದಾರೆ. ಈ ಮಾತನ್ನು ನಾನು ಹೇಳುತ್ತಿಲ್ಲ ಸದನದಿಂದ ಹೊರಡಗೆ ನೀವು ಕೊಟ್ಟಿರತಕ್ಕ ಆಶ್ವಾಸನೆಗಳ ಬಗ್ಗೆ ನಾನು ಹೇಳುತ್ತಿಲ್ಲ. ನೀವು ಈ ಸದನದಲ್ಲಿ ಇಂಥ ಕೆಲಸ ಮಾಡುತ್ತೇವೆ, ಆಸ್ಪತ್ರೆಗಳನ್ನು ಮಾಡುತ್ತೇವೆ, ಹಾಸ್ಟೆಲ್‌ಗಳನ್ನು ಮಾಡುತ್ತೇವೆ, ಇಷ್ಟಿಷ್ಟು ಸ್ಕಾಲರ್‌ಷಿಪ್ ಕೊಡುತ್ತೇವೆ, ನೌಕರಿಗಳನ್ನು ಕೊಡುತ್ತೇವೆ, ಬ್ರಿಡ್ಜ್‌ಗಳನ್ನು ಮಾಡುತ್ತೇವೆ, ಇರಿಗೇಷನ್ ಮಾಡುತ್ತೇವೆಂದು ಹೇಳಿದ್ದಿರಲ್ಲ. ಅಂಥ ಒಂದು ಆಶ್ವಾಸನೆಯನ್ನು ನೀವು ಪೂರೈಸಲಿಕ್ಕೆ ಆಗಲಿಲ್ಲ. ಈಗ ನಿಮಗೆ ಯಾವ ನೈತಿಕ ಹಕ್ಕು ಇದೆ ಇದನ್ನು ಕೇಳುವುದಕ್ಕೆ ? ಉತ್ತರ ಕೊಡಿ ಎಂದು ನಮ್ಮನ್ನು ಕೇಳುವುದಕ್ಕೆ ? ನಿಜವಾಗಿಯೂ ಕೂಡ ನಿಮಗೆ ಯಾವ ಹಕ್ಕು ಇಲ್ಲ. ಇವತ್ತು ನೀವು ಇಷ್ಟೆಲ್ಲ ಮಾತನಾಡತಕ್ಕಂಥವರು, ರೈತರ ಬಗ್ಗೆ ಇಷ್ಟೊಂದು ಕಾಳಜಿ ಇರುವವರು ಶ್ರೀಮಾನ್ ಯಡಿಯೂರಪ್ಪನವರು ಈ ಸಮಯದಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಮಾನ್ಯ ಬಾಬಾಗೌಡರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಟೋಟಲ್ ಕಲ್ಟಿವೇಟರ್ಸ್ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥರು ಎಷ್ಟೆಂದರೆ ಕರ್ನಾಟಕ ಎಕನಾಮಿಕ್ಸ್ ಅಂಡ್ ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿನವರು ೧೯೮೭-೮೮ ರಲ್ಲಿ ಕೊಟ್ಟಿರತಕ್ಕಂಥ ಅಂಕಿ ಸಂಖ್ಯೆಗಳ ಆಧಾರದ ಮೇಲೆ ೫೨,೨೨,೩೨೦ ಜನರು ಇದ್ದಾರೆ. ಇದರಲ್ಲಿ ಸಣ್ಣ ಅತಿಸಣ್ಣ ಹಿಡುವಳಿದಾರರು ೦.೫ ಹೆಕ್ಟೇರ್ಸ್ ಇರತಕ್ಕಂಥವರು ೨೦ ಲಕ್ಷ ೩ ಸಾವಿರದ ೧೬೪ ಇದ್ದಾರೆ. ಅದೇ ರೀತಿಯಲ್ಲಿ ೧ ರಿಂದ ೨ ಹೆಕ್ಟೇರ್ಸ್ ಜಮೀನು ಹೊಂದಿರತಕ್ಕಂಥವರು ಹಿಡುವಳಿದಾರರು ೧೭ ಲಕ್ಷ ೪೨ ಸಾವಿರ ೬೪೮. ಅದೇರೀತಿಯಲ್ಲಿ ೫ ರಿಂದ ೧೦ ಹೆಕ್ಟೇರ್ಸ್ ಒಳಗಡೆ ಇರತಕ್ಕಂಥವರು ೩೦ಲಕ್ಷ ೨೫ ಸಾವಿರದ ೯೨೩. ಅದೇ ರೀತಿಯಲ್ಲಿ ೧೦ ರಿಂದ ೨೦ ಹೆಕ್ಟೇರ್ಸ್ ಮೇಲೆ ಇರತಕ್ಕಂಥವರು ೨೦ ಲಕ್ಷ ೭೭ ಸಾವಿರ ೩೨೭. ಅಂದರೆ ೨೦ ರಿಂದ ಮೇಲಕ್ಕೆ ಹೋದಾಗ ಕೇವಲ ೬.೭ ಲಕ್ಷ ಜನ ಕಲ್ಟಿವೇಟರ್ಸ್ ಸಿಗುತ್ತಾರೆ. ಉಳಿದ ಕಲ್ಟಿವೇಟರ್ಸ್ ೪೦ ರಿಂದ ೪೨ ಲಕ್ಷ ಅವರೆಲ್ಲರೂ ಕೂಡ ಸಣ್ಣ ಅತಿ ಸಣ್ಣ ಹಿಡುವಳಿದಾರರೆ ಇರತಕ್ಕಂಥವರು. ಅವರ ಬಗ್ಗೆ ಯಾಗಲಿ ಅಥವಾ ರಾಜ್ಯದಲ್ಲಿರತಕ್ಕಂಥ ೩೬ ಲಕ್ಷ ಏನು ಅಗ್ರಿಕಲ್ಚರ್ ಲೇಬರರ್ಸ್ ಕೃಷಿಕಾರ್ಮಿಕರು ಇದ್ದಾರೆ ಅವರ ಬಗ್ಗೆ ಇಲ್ಲಿಯವರೆಗೂ ಮಾನ್ಯ ಬಿ.ಜೆ.ಪಿ. ಪಕ್ಷದವರಾಗಲಿ, ಮಾನ್ಯ ಸಿ.ಪಿ.ಐ ಮತ್ತು ಸಿ.ಪಿ.ಎಂ.ರವರಾಗಲಿ ಒಂದು

ಸ್ಪಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ಹೋರಾಟವನ್ನು ಮಾಡಿದ್ದುದನ್ನು ನಾವು ನೋಡಲಿಲ್ಲ. ಇವೊತ್ತು ಹೇಳುತ್ತೇನೆ, ಅಗ್ರಿಕಲ್ಚರ್ ಲೇಬರರ್ಸ್‌ಗೆ ಸರಿಯಾಗಿ ಕೂಲಿಯನ್ನು ಕೊಟ್ಟಿಲ್ಲ, ಸರಿಯಾದ ಎಂಪ್ಲಾಯ್‌ಮೆಂಟ್ ಗ್ಯಾರೆಂಟಿ ಕೊಟ್ಟಿಲ್ಲವೆಂದು ಅದರ ಬಗ್ಗೆ ಯಾರೂ ಕೇಳಿದ್ದುದು ನಾನು ನೋಡಲಿಲ್ಲ. ಅವರ ಬಗ್ಗೆ ಈ ಸದನದಲ್ಲಿ ಪ್ರತಿಭಟನೆ ಮಾಡಿದ್ದಾಗಲಿ ಅಥವಾ ಭಾಷಣ ಮಾಡಿದ್ದಾಗಲಿ ನಾನು ಕೇಳಲಿಲ್ಲ. ಇಪ್ಪತ್ತು ವರ್ಷಗಳಿಂದಲೂ ನಾನು ಈ ಸದನದಲ್ಲಿದ್ದೇನೆ. ಅವರ ಬಗ್ಗೆ ಒಂದು ರೂಪುರೇಷೆ ಪ್ಲಾನ್‌ಸ್ಕೀಮ್ ಹಾಕಿಕೊಳ್ಳಬೇಕೆಂತಲೂ ಕೂಡ ಇವರು ಹೇಳಲಿಲ್ಲ. ಇವತ್ತು ಅವರ ಬಗ್ಗೆ ಚಿಂತನೆ ಮಾಡಬೇಡಿ ಎಂದು ಯಾರೂ ಹೇಳಲಿಲ್ಲ, ಯಾರಿಗೆ ಹೊಟ್ಟೆಗಿಲ್ಲ, ಯಾರಿಗೆ ಮನೆಗೆ ದೀಪವಿಲ್ಲ ಅಂಥವರ ಬಗ್ಗೆ ಚಿಂತನೆ ಮಾಡಬೇಕು. ಎಷ್ಟು ಜನ ಅಗ್ರಿಕಲ್ಚರ್ ಲೇಬರರ್ಸ್ ಇದ್ದಾರೆ, ಸಣ್ಣ ಅತಿಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಅವರ ಬಗ್ಗೆ ಚಿಂತನೆ ಮಾಡಿದ್ದರೆ ನಾನು ಒಪ್ಪುತ್ತಿದ್ದೆ. ಅವರ ಬಗ್ಗೆ ಮಾತನಾಡಿದ್ದರೆ ನಾನು ಮೆಚ್ಚುತ್ತಿದೆ. ನಾನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದೆ. ಅವರು ಕೇಳುತ್ತಿರುವುದು ಯೋಗ್ಯವಾಗಿದೆ. ಸರ್ವಸಾಮಾನ್ಯವಾಗಿ ಅದನ್ನು ಸ್ವೀಕಾರ ಮಾಡುವಂಥದ್ದಾಗಿದೆ. ಅದನ್ನು ಮಾಡಿ ಎಂದು ಹೇಳುತ್ತಿದ್ದೆ.

ಆದರೆ ಇವತ್ತು ಯಾರ ಬಗ್ಗೆ ನೀವು ಕೇಳುತ್ತಿದ್ದೀರೆಂದು ಸ್ಪಷ್ಟವಾಗಿ ಹೇಳಲಿಲ್ಲ. ಯಾವ ರೈತರು ಎಷ್ಟು ಸಾಲ ತೆಗೆದುಕೊಂಡಿದ್ದಾರೆ ಯಾವ ಹಂತದಲ್ಲಿರತಕ್ಕ ರೈತರ ಬಗ್ಗೆ ಇವತ್ತು ನೀವು ಚಿಂತನೆ ಮಾಡುತ್ತಿದ್ದೀರಿ, ಯಾರ ಬಗ್ಗೆ ಸಾಲ ಮಾಫಿ ಮಾಡಿ ಎಂದು ಕೇಳುತ್ತಿದ್ದೀರಿ ಆ ಬಗೆ ಅಂಕಿ ಸಂಖ್ಯೆಗಳನ್ನು ಕೊಟ್ಟು ಅದರ ಗಹನತೆಯನ್ನು ತಿಳಿಸಿ ಹೇಳಿದ್ದರೆ ನಮಗೂ ಅರ್ಥವಾಗುತ್ತಿತ್ತು ಮತ್ತು ಸದನದಲ್ಲಿ ನಾವು ಕೂಡ ಸ್ಪಷ್ಟವಾಗಿ ಹೇಳುತ್ತಿದ್ದೆವು. ಇಂಥ ರೈತರ ಪರವಾಗಿ ಅವರು ಕೇಳುತ್ತಿದ್ದಾರೆ, ಅವರ ಬೇಡಿಕೆಯನ್ನು ಈಡೇರಿಸಿ ಎಂದು ಹೇಳುತ್ತಿದ್ದೆವು, ಇವತ್ತು ನಮ್ಮ ದೇಶದಲ್ಲಿ ಶೇಕಡ ೭೦ರಷ್ಟು ಹಳ್ಳಿಯಲ್ಲಿರತಕ್ಕ ಜನರಿದ್ದಾರೆ. ಉಳಿದ ಶೇಕಡ ೩೦ರಷ್ಟು ಜನ ಮಾತ್ರ ಸಿಟಿಯಲ್ಲಿರ ತಕ್ಕವರು. ಅವರನ್ನು ಪ್ರತಿನಿಧಿಸತಕ್ಕ ಸದಸ್ಯರು ಇಲ್ಲಿದ್ದಾರೆ. ಅನೇಕ ಮಾನ್ಯ ಸದಸ್ಯರು ಸಿಟಿ ಯಲ್ಲಿದ್ದರೂ ಕೂಡ ಅವರಿಗೆ ಹಳ್ಳಿಯ ಸಂಪರ್ಕ ಸಮೀಪ ಇರುವುದರಿಂದ ಅವರಿಗೆ ಸಹಾಯ ಮಾಡತಕ್ಕ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ನಾವು ಅವರ ಒಂದು ಸಮಸ್ಯೆಗಳನ್ನು ಕಡೆಗಣಿಸುತ್ತೇವೆ, ಅವರ ಸಮಸ್ಯೆಗಳನ್ನು ತಿರಸ್ಕರಿಸುತ್ತೇವೆಂದು ಅಲ್ಲ. ಯಾರು ತಿರಸ್ಕಾರ ಮಾಡುತ್ತಾರೆ ಅವರು ಉಳಿಯುವುದಿಲ್ಲ. ಇವತ್ತು ನಾವು ಮೆಜಾರಿಟಿಯಿಂದ ಬಂದಿದ್ದೇ ವೆಂದು ಖುಷಿಪಟ್ಟುಕೊಂಡು ಹೇಳುವುದಿಲ್ಲ. ಅದಕ್ಕೆ ಒಂದು ಪದ್ಧತಿ ಇದೆ, ಇತಿಮಿತಿ ಇದೆ. ಆ ಒಂದು ಇತಿಮಿತಿಯಲ್ಲಿ ಸರ್ಕಾರದ ಮನವನ್ನು ಒಲಿಸಿಕೊಟ್ಟರೆ, ಇಂಥ ರಿಸೋರ್ಸಸ್‌ನಲ್ಲಿ ಇದನ್ನು ಮಾಡಬಹುದೆಂದು ಮನವರಿಕೆ ಮಾಡಿಕೊಟ್ಟರೆ ಸರ್ಕಾರ ಖಂಡಿತ ಮಾಡುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇವತ್ತು ೧೭೭ ಜನರಲ್ಲಿ ಅನೇಕ ಜನರು ಇದಕ್ಕೆ ಸಪೋರ್ಟ್ ಮಾಡತಕ್ಕವರು ಇದ್ದಾರೆ ಅವರೆಲ್ಲಾ ರೈತರ ಪರವಾಗಿರತಕ್ಕವರು. ಈ ಹಿಂದೆ ಮಾನ್ಯ ಏಕಾಂತಯ್ಯನವರು ಸಹಕಾರ ಸಚಿವ ರಾಗಿದ್ದರು. ಅವರಿಗೆ ರೈತರ ಬಗ್ಗೆ ಹೆಚ್ಚಿನ ಕಳಕಳಿಯಿದೆ, ಅವರು ಈಗ ವಿರೋಧ ಪಕ್ಷದಲ್ಲಿರ ಬಹುದು. ಆದರೆ ಅವರು ಸಹಕಾರ ಸಚಿವರಾಗಿದ್ದಾಗ ಅವರು ಸ್ಪಷ್ಟವಾಗಿ ಹೇಳುತ್ತಿದ್ದರು ರಿಕವರಿ ಯನ್ನು ಸ್ವಲ್ಪ ತಡೆಹಿಡಿಯಿರಿ ಎಂದರೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ರಿಕವರಿ ಇದೆ ಆ ರಿಕವರಿ ಆಗದಿದ್ದರೆ ಮುಂದೆ ಸಾಲ ಕೊಡುವುದಕ್ಕಾಗುವುದಿಲ್ಲವೆಂದು ಮಾನ್ಯ ಏಕಾಂತಯ್ಯನವರು ಇದೇ ಸದನದಲ್ಲಿ ಕಂಠಿತು ಹೇಳಿದ್ದರು. ಏಕೆಂದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿದ ಮೇಲೆ ಅವರು ಕೂಡ ಈ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಈ ಸದನದಲ್ಲಿ ಹೇಳಿದ್ದರು. ಅದೇ ರೀತಿ ನಾವು ಇವತ್ತು ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ಇವತ್ತು ಬಿಜೆಪಿ ಮಿತ್ರರು ಕೇಂದ್ರ ಸರ್ಕಾರದಲ್ಲಿದ್ದಾರೆ, ಅವರು ನೇರವಾಗಿ ಪಾರ್ಟಿಸಿಪೇಟ್ ಮಾಡದಿದ್ದರೂ ಹೊರಗಡೆ ಇದ್ದು ಇಶ್ಯೂಸ ಮೇಲೆ ಸಪೋರ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ರಾಮಚಂದ್ರ ಮಜದೀದ್ ಎಲ್ಲ ಬಂದಮೇಲೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತಾರೋ ಆ ಮಾತು ಬೇರೆ. ವಿ.ಪಿ. ಸಿಂಗ್ ರನ್ನು ಚರಣಸಿಂಗರನ್ನು ಮಾಡಿದ ಹಾಗೆ ಮಾಡುತ್ತಾರೆ ಎಂದು ಹೊರಗಡೆ ಇರುವವರು ಹೆದರಿಸುತ್ತಾರೆ

ಒಬ್ಬ ಮಾನ್ಯ ಸದಸ್ಯರು.—ಇಲ್ಲಿ ನೀವು ನಿಮ್ಮ ಚಿಂತೆ ಮಾಡಿ, ಅಲ್ಲಿಯ ಚಿಂತನೆಯನ್ನು ಏಕೆ ಮಾಡುತ್ತೀರಿ ? ದಯವಿಟ್ಟು ಹಳಿ ತಪ್ಪಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇಂದ್ರ ಸರ್ಕಾರ ಒಂದು ಸ್ಟೇಬಲ್ ಗವರ್ನಮೆಂಟ್ ಆಗಿ ಇದ್ದರೆ, ಒಳ್ಳೆಯ ಸರ್ಕಾರವಾಗಿ ಒಳ್ಳೆಯ ಆಡಳಿತ ಕೊಟ್ಟರೆ ರಾಜ್ಯದಲ್ಲಿರತಕ್ಕ ಸರ್ಕಾರಗಳು ಸುಲಲಿತ ವಾಗಿ ನಡೆಯುತ್ತವೆ. ನಮ್ಮ ಯೋಜನೆಗಳು ಏನಿವೆ ಅವು ಒಳ್ಳೆಯ ರೀತಿಯಿಂದ ಅಪ್ರೂವ್ ಆಗಿ ಬರುತ್ತವೆ. ಫೈನಾನ್ಸ್ ಮಿನಿಸ್ಟರ್ ಒಂದು ಹೇಳುವುದು, ಪ್ರೈಮಿನಿಸ್ಟರ್ ಒಂದು ಹೇಳುವುದು,

ಡೆಪ್ಯೂಟಿ ಪ್ರೈಮಿನಿಸ್ಟರ್ ಒಂದು ಹೇಳುವುದು ಅಂದರೆ ಆಗುವುದಿಲ್ಲ. ಆ ರೀತಿ ಆದರೆ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಯಾವ ರೀತಿ ಸಹಕಾರ ಸಿಗಬೇಕೋ ಅದು ಸಿಗುವುದಿಲ್ಲ,

ಶ್ರೀ ಬನ್ನಿಕೊಡು ಬಸಪ್ಪ.—ತಾವು ಆಶ್ವಾಸನೆ ಕೊಡುವಂತಹ ವಿಷಯದ ಬಗ್ಗೆ ಚರ್ಚೆ ಮಾಡಬೇಕೇ ಹೊರತು ರಾಷ್ಟ್ರದ ವಿಷಯದ ಬಗ್ಗೆ ಅಲ್ಲ. ೪೨ ವರ್ಷಗಳಿಗೂ ಮೇಲ್ಪಟ್ಟು ಸ್ಪಷ್ಟವಾಗಿ ದೇಶದಲ್ಲಿ ನೀವೇ ಆಡಳಿತ ಮಾಡಿದಾಗ ರೈತರು ಬಡವರು ಕೂಲಿಗಾರರ ಬಗ್ಗೆ ಅನುಕಂಪ ತೋರಿದಿರಾ ಅಥವಾ ಏನು ಮಾಡಿದಿರಿ ಎಂಬುದನ್ನು ತಾವು ಮನವರಿಕೆ ಮಾಡಿಕೊಂಡು ಮಾತನಾಡುವುದು ಒಳ್ಳೆಯದು.

೪–೦೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆ ಅಂದರೆ ನಿಮ್ಮ ಮನ ನೋಯಿಸಬೇಕು ಅಥವಾ ನಿಮ್ಮ ಪಕ್ಷದ ಮುಖಂಡರನ್ನು ಹೀಯಾಳಿಸಬೇಕು ಎಂಬ ಅಭಿಪ್ರಾಯ ನಮಗಿಲ್ಲ. ಅವರ ಬಗ್ಗೆ ನನಗೆ ಗೌರವ ಇದೆ. ನಾನು ಹೇಳುವುದು ಕೇಂದ್ರದಲ್ಲಿ ಒಳ್ಳೆಯ ಸರ್ಕಾರ, ಸ್ಟೇಬಲ್ ಗೌರ್ನಮೆಂಟ್ ಇದ್ದರೆ ನಮ್ಮ ಯೋಜನೆಗಳೇನಿವೆ ಅವು ಸರಿಯಾದ ರೀತಿಯಲ್ಲಿ ಒಪ್ಪಿಗೆಯಾಗಿ ಬರುತ್ತವೆ ಎಂದು,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷಣಿಯವರೆ ಮಾನ್ಯ ಖರ್ಗೆಯವರು ಈ ಸದನದ ಅತ್ಯಂತ ಹಿರಿಯ ಸದಸ್ಯರಲ್ಲಿ ಒಬ್ಬರು. ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದು ಎರಡೂ ಕಡೆಯಿಂದ ಕೆಲಸ ಮಾಡಿರತಕ್ಕ ಮಾನ್ಯ ಸದಸ್ಯರು ಅವರು, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸತಕ್ಕ ಭಾಷಣ ಮಾಡತಕ್ಕ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಇತಿಮಿತಿಗಳ ಬಗ್ಗೆ ಹೇಳಲಿ. ನಮ್ಮ ಮಿತ್ರರು ದೆಹಲಿಯಲ್ಲಿ ಹೋಗಿ ಕುಳಿತಿರತಕ್ಕ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಆಗಬೇಕಾದ ಸಹಾಯದ ಬಗ್ಗೆ ಮಾತನಾಡಿದರೆ ಅದನ್ನು ನಾವು ಅಡ್ಡಿಪಡಿಸುವುದಿಲ್ಲ. ನಾವು ಅವರ ಭಾಷಣ ಕೇಳುತ್ತೇವೆ. ಸೂಕ್ತವಾದ ಸಮಯದಲ್ಲಿ ಅದರ ಬಗ್ಗೆ ನಾವೂ ಮಾತನಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಅದಕ್ಕೇ ೨೪ ಜನ ಆರಿಸಿಬಂದಿರುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—೨೪ ಜನ ಸದಸ್ಯರು ಗೆದ್ದು ಬಂದಿದ್ದೀರಿ ಎಂಬುದನ್ನು ಪದೇಪದೇ ಹೇಳುವ ಅವಶ್ಯಕತೆ ಇಲ್ಲ. ನಮ್ಮ ಇತಿಮಿತಿ ಅರ್ಥಮಾಡಿಕೊಂಡು ನಾವು ವರ್ತನೆ ಮಾಡುತ್ತೇವೆ. ಕೇಂದ್ರಸರ್ಕಾರ ಸ್ಟೇಬಲ್ ಆಗಿದೆಯೋ ಇಲ್ಲವೋ, ವಿ.ಪಿ. ಸಿಂಗ್ ಚರಣಸಿಂಗ್ ಆಗುತ್ತಾರೋ ಇಲ್ಲವೋ ಎಂಬ ಬಗ್ಗೆಯಾಗಲೀ ಬಾಬರಿ ಮಸೀದಿ, ರಾಮ ಜನ್ಮಭೂಮಿ ವಿಷಯದ ಬಗ್ಗೆಯಾಗಲೀ ಈಗ ಪ್ರಸ್ತಾಪ ಮಾಡುತ್ತಾ ಹೋದರೆ ಮೂರು ದಿನದಲ್ಲಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗುವುದಿಲ್ಲ. ಕೇಂದ್ರದಲ್ಲಿ ಭದ್ರ ಸರ್ಕಾರ ಇಲ್ಲದೇಹೋದರೆ ನಮ್ಮ ಯೋಜನೆಗಳು ಮಂಜೂರಾಗಿ ಬರುವುದಿಲ್ಲ, ದುಡ್ಡು ಏನು ಬರಬೇಕೋ ಅದು ಬರುವುದಿಲ್ಲ ಎಂದು ಹೇಳಿದ್ದೀರಿ. ಅದಕ್ಕೆ ನಾನು ಕೇಳುತ್ತೇನೆ ಕೇಂದ್ರದಲ್ಲಿ ಭದ್ರ ಸರ್ಕಾರ ಇದ್ದಾಗ ಕರ್ನಾಟಕ ರಾಜ್ಯಕ್ಕೆ ಆಗಿರತಕ್ಕದ್ದು ಏನು ಎಂಬುದನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಏನು ಮಾಡಿದ್ದೇವೆ ಏನು ಮಾಡಿಲ್ಲ ಎಂದು ಹೇಳಿಕೊಂಡೇ ತಾವು ಅಧಿಕಾರಕ್ಕೆ ಬಂದಿದ್ದೀರಿ. ನಾವು ಏನು ಹೇಳುತ್ತೇವೆ, ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂ ಇದೆ, ಜವಾಹರ್ ರೋಜಗಾರ್ ಯೋಜನೆ ಇದೆ, ನೆಹರೂ ರೋಜಗಾರ್ ಯೋಜನೆ ಇದೆ, ಇಂದಿರಾ ಅವಾಸ್ ಯೋಜನೆ ಇದೆ. ಇದಕ್ಕೆಲ್ಲಾ ಕೇಂದ್ರಸರ್ಕಾರದಿಂದ ಹಣ ಬರುತ್ತದೆ. ನಾವು ಕೂಡ ಸ್ವಲ್ಪ ಹಣ ಕೊಡಿಸಬೇಕಾಗುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಸಬ್‌ಪ್ಲಾನ್ ನಲ್ಲಿ ಬರತಕ್ಕ ಹಣ ಕೇಂದ್ರಸರ್ಕಾರದಿಂದ ಬರುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ.—ತೆರಿಗೆ ಕೊಡುವವರು ಕರ್ನಾಟಕದವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಸರ್ಕಾರ ಇದ್ದಾಗಲೂ ಅಲ್ಲಿಂದ ಹಣ ಬರುತ್ತದೆ. ನಿಮ್ಮ ಸರ್ಕಾರ ಇದ್ದಾಗಲೂ ಅಲ್ಲಿಂದ ಹಣ ಬರುತ್ತದೆ. ಯೋಜನೆಗಳಿಗೆ ಎಷ್ಟೆಷ್ಟು ಆದ್ಯತೆ ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ಸುದೈವದಿಂದ ಯೋಜನಾ ಆಯೋಗದ ಉಪಾಧ್ಯಕ್ಷರು ಕರ್ನಾಟಕ ರಾಜ್ಯದವರೇ ಆಗಿದ್ದಾರೆ. ಅವರು ಎಷ್ಟರಮಟ್ಟಿಗೆ ಸಹಾಯ ಮಾಡುತ್ತಾರೋ ಕಾದು ನೋಡಬೇಕಾಗಿದೆ. ಮೊನ್ನೆ ಅವರು ಮಾತನಾಡುವಾಗ ಕರ್ನಾಟಕದ ಹಿತವನ್ನು ಸಂಪೂರ್ಣವಾಗಿ ಕಾಪಾಡುತ್ತೇನೆ ಹೆಚ್ಚಿನ ಸಹಾಯ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದು ಸಂತೋಷ. ಆದರೆ ಇವತ್ತು ಅನೇಕ ಯೋಜನೆಗಳು ಕೇಂದ್ರಸರ್ಕಾರಕ್ಕೆ ಹೋದಮೇಲೆ ಅಲ್ಲಿ ಬೇಕಾದಂಥ ಜನ ಇಲ್ಲದೇಹೋದರೆ ಆ ಯೋಜನೆಗಳು ಅಪ್ರೂವ್ ಆಗಿ ಬರುವುದಿಲ್ಲ.

ಅದಕ್ಕಾಗಿ ಈ ಮಾತನ್ನು ಹೇಳಿದೆನೇ ಹೊರತು ಅಲ್ಲಿ ಅನ್‌ಸ್ಟೇಬಲ್ ಗೌರ್ನಮೆಂಟ್ ಇದೆ ಅದು ಹೋಗುತ್ತದೆ, ತಕ್ಷಣ ನಾವು ಬರುತ್ತೇವೆ ಎಂದು ಅಲ್ಲ. ಅಲ್ಲಿ ವಿರೋಧ ಪಕ್ಷವೂ ಕೂಡಾ ಅಷ್ಟೇ ಸ್ಟ್ರಾಂಗ್ ಇದೆ. ವಿರೋಧ ಪಕ್ಷ ನಾಮಕಾವಸ್ಥೆಯಲ್ಲಿಲ್ಲ. ಸರಿ ಸಮಾನವಾದ ವಿರೋಧ ಪಕ್ಷ ಅಲ್ಲಿ ಇವೊತ್ತಿದೆ. ಎಲ್ಲಕ್ಕಿಂತಲೂ ನಮಗೆ ಸಂಬಂಧಪಟ್ಟ ಹಾಗೆ ಈ ರಾಜ್ಯಕ್ಕೆ ಪ್ಲಾನ್ಡ್ ಸ್ಕೀಮ್‌ನಲ್ಲಿ ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ಸರಿಯಾದ ರೀತಿಯಲ್ಲಿ ಬರಬೇಕು. ಅದಕ್ಕೆ ಒಂದು ಭದ್ರವಾದ ಸರ್ಕಾರ ಇರಬೇಕು. ಫರ್ಮ್ ಡಿಸಿಷನ್ ತೆಗೆದುಕೊಂಡು ಅದನ್ನು ಆಚರಣೆಗೇ ತರತಕ್ಕ ಜನರು ನಮಗೆ ಬೇಕು. ಅನ್‌ಸ್ಟೇಬಲ್ ಗೌರ್ನಮೆಂಟ್ ಉರುಳಿದರೆ ನಾವು ಬರುತ್ತೇವೆನ್ನುವ ದೃಷ್ಟಿಯಿಂದಲ್ಲ ನಾನು ಹೇಳಿದ್ದುದು. ಇವತ್ತು ಒಳ್ಳೆಯ ರೀತಿಯಲ್ಲಿ ಕೆಲಸ ಆಗಬೇಕು. ಅಲ್ಲೂ ಕೂಡಾ ಆ ಸರ್ಕಾರ ಎಫೆಕ್ಟೀವಾಗಿ ಒಳ್ಳೆಯ ಕೆಲಸ ಮಾಡಲಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಫೆಡರಲ್ ಸ್ಟ್ರಕ್ಚರ್ ಗೌರ್ನಮೆಂಟ್ ಇದೆ. ಇಲ್ಲಿ ಮತ್ತು ಅಲ್ಲಿ ಬೇರೆ ಬೇರೆ ಪಕ್ಷಗಳ ಸರ್ಕಾರ ಇವೆ. ಇದ್ದರೂ ಕೂಡಾ ನಮ್ಮ ಯೋಜನೆಗಳ ಬಗ್ಗೆ ಅವರೂ ಅಷ್ಟೇ ಮಹತ್ವವನ್ನು ಕೊಡುತ್ತಾರೆ. ಇವತ್ತು ಅಲ್ಲಿ ಅವರೇ ಯೋಜನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬಹುದು. ಅವರ ಐಡಿಯಾದಂತೆ ಅವರು ಮಾಡಬಹುದು. ಇಲ್ಲಿ ನಮ್ಮ ಐಡಿಯಾ ಪ್ರಕಾರ ನಾವು ಯೋಜನೆ ತಯಾರು ಮಾಡಿ ಇಟ್ಟಿದ್ದೇವೆ. ಹಿಂದೆಯೂ ಕೂಡಾ ನಾವು ಕೆಲವು ಐಡಿಯಾಗಳನ್ನು ಇಟ್ಟುಕೊಂಡು ಅಲ್ಲಿ ಯೋಜನೆ ತಯಾರು ಮಾಡಿಟ್ಟಿದ್ದೆವು. ಈಗ ಏನಾಗುತ್ತದೆಂದರೆ, ಯಾವುದೇ ಸರ್ಕಾರ ಬಂದ ತಕ್ಷಣ ಹಿಂದೆ ಮಾಡಿದ್ದನ್ನು ಬಿಟ್ಟು ಬಿಟ್ಟು ತಾವು ಇನ್ನೊಂದು ಪ್ಲಾನ್ ಹಾಕುವುದು ವಾಡಿಕೆಯಾಗಿದೆ. ಇದರಿಂದಾಗಿ ಜನರಿಗೆ ತೊಂದರೆಯಾಗುತ್ತದೆ. ಅದಕ್ಕೆ ನಾನು ಹೇಳುವುದು ಇಷ್ಟೇ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಂದಾಣಿಕೆಯಿಂದ ಕೆಲಸ ಮಾಡಿ ಜನರ ಹಿತ ದೃಷ್ಟಿಯಿಂದ ಒಳ್ಳೆಯ ಯೋಜನೆಗಳು ಏನು ಇವೆ ಅವನ್ನು ಸಂಪೂರ್ಣವಾಗಿ ಆಚರಣೆಗೆ ತರಬೇಕು. ನಮ್ಮ ಸರ್ಕಾರ ಇವತ್ತಿನ ದಿವಸ ೨೦ ಅಂಶಗಳ ಕಾರ್ಯಕ್ರಮಗಳ ಬಗ್ಗೆ ಬದ್ಧವಾಗಿದೆ ಎಂಬುದನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟಪಡಿಸಲಾಗಿದೆ. ೨೦ ಅಂಶಗಳ ಕಾರ್ಯಕ್ರಮಗಳ ಬಗ್ಗೆ ಹಿಂದಿನ ಸರ್ಕಾರ ಹೆಚ್ಚಿನ ಗಮನವನ್ನು ಕೊಡಲಿಲ್ಲ. ಅದಕ್ಕೆ ಕಾರಣ ಅನೇಕ ಇರಬಹುದು. ೨೦ ಅಂಶಗಳ ಕಾರ್ಯಕ್ರಮ ಎಂದರೆ ಶ್ರೀಮತಿ ಇಂದಿರಾ ಗಾಂಧಿಯಂವರ ಹೆಸರಿನ ಮೇಲೆ ಹೆಚ್ಚು ಪಾಪುಲಾರಿಟಿ ಸಿಗುತ್ತದೆ ಎಂದು, ಹೆಚ್ಚು ಪ್ರಚಾರ ಸಿಗುತ್ತದೆ ಎಂದು ದೃಷ್ಟಿ ಇಟ್ಟುಕೊಂಡು ಅದಕ್ಕೆ ಇವರದೇ ಕೆಲವು ಪಾಯಿಂಟ್‌ಗಳನ್ನು ಸೇರಿಸಿ ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂದು ಬೇರೆ ರೀತಿಯಿಂದ ಮಾಡಿ ಎಲ್ಲಿಯವರೆಗೆ ಹೋದರು ಎಂದರೆ, ಹೆಸರಿಗೆ ಮಾತ್ರ ಹೇಳಿದರೇ ಹೊರತು ಜಿಲ್ಲೆಯಲ್ಲಿ ಯಾವುದೇ ರೀತಿಯ ಕೆಲಸ ಆಗಲಿಲ್ಲ, ಒಂದು ದಿವಸ ಕೂಡಾ ಆ ಜಿಲ್ಲೆಗಳಿಗೆ ನೇಮಿಸಲ್ಪಟ್ಟ ಮಂತ್ರಿಗಳು ಬಂದು ಎಷ್ಟು ಕೆಲಸ ಈ ಕಾರ್ಯಕ್ರಮದ ಅಡಿಯಲ್ಲಿ ಇಂಪ್ಲಿಮೆಂಟ್ ಆಗಿದೆ ಬಡವರಿಗೆ ಏನು ಲಾಭ ಆಗಿದೆ ಎಂಬುದನ್ನು ನೋಡಲಿಲ್ಲ ಅವರು ಎಷ್ಟರ ಮಟ್ಟಿಗೆ ಆಸಕ್ತಿ ವಹಿಸಿದ್ದರು ಎನ್ನುವುದು ಬಹುಶಃ ಅವರಿಗೇ ಗೊತ್ತಿದೆ. ಸಂಬಂಧಪಟ್ಟ ಮಂತ್ರಿಗಳು ಒಂದು ದಿವಸ ಕೂಡ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಲಿಲ್ಲ. ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ...

ಶ್ರೀ ಎಚ್. ಏಕಾಂತಯ್ಯ. — ಮಾನ್ಯ ಸದಸ್ಯರು ಏನು ೨೦ ಅಂಶಗಳ ಬಗ್ಗೆ ಯಾರೂ ಪರಿಶೀಲನೆ ಮಾಡಿಲ್ಲವೆಂದು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾದುದು. ನನ್ನ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯ ಶಾಸಕರನ್ನು ಕರೆದು ಕೇಳಿ. ಅವರು ನೀವು ಹೇಳಿದ ಹಾಗೆ ಹೇಳಿದರೆ ಆಗ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಜಿಲ್ಲೆಯ ಮಂತ್ರಿಗಳ ಬಗ್ಗೆ ಹೇಳಿದರೆ ನನಗೆ ಗೊತ್ತಿಲ್ಲ. ಎಲ್ಲಾ ಜಿಲ್ಲೆಯ ಮಂತ್ರಿಗಳು ಮಾಡಿಲ್ಲ ಎಂದರೆ ಅದು ಸರಿಯಲ್ಲ. ಆ ಮಾತನ್ನು ಮತ್ತೊಮ್ಮೆ ವಿಮರ್ಶೆ ಮಾಡಿ ಹೇಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಮಂತ್ರಿಗಳು ಎಂದರೆ ಏಕಾಂತಯ್ಯನವರು ಎಂದೇನಲ್ಲ. It is a government. I am charging the previous Government. They have not taken any interest. ಇದು ಪ್ರೊಸೀಡಿಂಗ್ಸ್‌ನಲ್ಲಿ ಇದೆ. ಬೇಕಾದರೆ ಛಾಲೆಂಜ್ ಮಾಡುತ್ತೇನೆ. ಡೆಟ್ ರಿಲೀಫ್ ಆಕ್ಟ್ ಬಗ್ಗೆ ಈ ಸದನದಲ್ಲಿ...

ಶ್ರೀ ಎಚ್. ಏಕಾಂತಯ್ಯ. — ನೀವು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಯಾವ ಮಂತ್ರಿಯೂ ಮಾಡಿಲ್ಲವೆಂದು ಹೇಳಬೇಡಿ. ಡೆಟ್ ರಿಲೀಫ್ ಆಕ್ಟ್ ಏನಿದೆ ಅದನ್ನು ಸಹಾ ನಾನು ಜಿಲ್ಲಾ ಮಂತ್ರಿಯಾಗಿ ವಿಮರ್ಶೆ ಮಾಡಿದ್ದೇನೆ. ಬೇಕಾದರೆ ತಾವು ಪ್ರೊಸೀಡಿಂಗ್ಸ್ ತೆಗೆದು ನೋಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಹೇಳುತ್ತಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ತಾವು ಇಲ್ಲಿ ಕುಳಿತಿದ್ದೀರಿ, ನಾನು ಆ ಕಡೆ ಇದ್ದಾಗ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದೇನೆಂದರೆ ಅಗ್ರಿಕಲ್ಚರಲ್ ಡೆಟ್ ಆಫ್ ರಿಲೀಫ್ ಆಕ್ಟ್ ಕೆಳಗೆ ಎಷ್ಟು ಜನರಿಗೆ ನಮ್ಮ ತಾಲ್ಲೂಕಿನೊಳಗೆ ರಿಲೀಫ್ ಕೊಟ್ಟಿದ್ದೀರಿ ಎಂಬು ಸಂಬಂಧಪಟ್ಟ ಮಂತ್ರಿಗಳು ಏನು ಉತ್ತರ ಕೊಟ್ಟರು ಎಂದರೆ ಆ ವಿಷಯ ನನ್ನ ಡಿಪಾರ್ಟ್‌ಮೆಂಟ್‌ಗೆ ಬರುವುದಿಲ್ಲವೆಂದು ಹೇಳಿದರು. ಆದರೆ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಎಷ್ಟು ಆಸಕ್ತಿಯಿಂದೆ ಎಂದು ಆ ಮಂತ್ರಿಗಳ ಬಗ್ಗೆ ಸಂಶಯ ಬರುತ್ತದೆ. ಈ ಸಬ್ಜೆಕ್ಟ್ ಅವರಿಗೆ ಬರಂತ್ತದೆ ಅವರು ಹೇಳುತ್ತಾರೆ ಈ ವಿಷಯ ನನ್ನ ಪ್ಯಾಕ್ಟಿಗೆ ಬರುವುದಿಲ್ಲ ಎಂದು. ಆಮೇಲೆ ಸೆಕ್ರೆಟರಿಯವರನ್ನು ಕೇಳಿ ಈ ವಿಷಯ ನಮಗೆ ಬರುತ್ತದೆಂದು ಹೇಳಿದರು. ನಾನು ಮಾನ್ಯ ಏಕಾಂತಯ್ಯನವರ ಬಗ್ಗೆ ಹೇಳುತ್ತಿಲ್ಲ. ಸರ್ಕಾರದಲ್ಲಿ ಕೆಲಸ ಮಾಡುವವರಿಗೆ ಗೊತ್ತಿಲ್ಲವೆಂದರೆ ಏನು? ೨೦ ಅಂಶಗಳ ಕಾರ್ಯಕ್ರಮದಲ್ಲಿ ಇದೂ ಒಂದು ಅಂಶ. ಬಡವರಿಗೆ ಇದರಿಂದ ಸಹಾಯವಾಗುತ್ತದೆ. ಎಲ್ಲಾ ಜನರಿಗೂ ಹಳ್ಳಿಯಲ್ಲಿರತಕ್ಕ ರೈತರಿಗೆ ಸಹಾಯ ವಾಗುತ್ತದೆ. ಅಂತಹ ವಿಷಯ ಇದು. ಆಂದರೆ ಇವರು ೨೦ ಅಂಶಗಳ ಕಾರ್ಯಕ್ರಮವನ್ನು ಎಷ್ಟರ ಮಟ್ಟಿಗೆ ಆಚರಣೆಗೆ ತಂದಿದ್ದಾರೆಂದು ಹೇಳೋಣ? ಪ್ರತಿಯೊಬ್ಬ ಜಿಲ್ಲಾ ಮಂತ್ರಿಗಳು ಮೂರು ತಿಂಗಳಿಗೊಮ್ಮೆ ರಿವ್ಯೂ ಮಾಡಿ ರಿಪೋರ್ಟ್ ಕೊಡಬೇಕು. ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲಾಧಿಕಾರಿ ಗಳನ್ನು ಕರೆಯಿಸಿ ರಿವ್ಯೂ ಮಾಡತಕ್ಕದ್ದು ಅವಶ್ಯಕತೆಯಿತ್ತು, ಆ ಕೆಲಸವನ್ನು ಇವರು ಮಾಡಲಿಲ್ಲ. ಇದಕ್ಕೆ ಬಹುಶಃ ಒಳ ಜಗಳವೇ ಕಾರಣವಿರಬಹುದು, ಅದು ಏನೇ ಇರಲಿ, ಕಾರಣ ಏನು ಎನ್ನುವುದು ಗೊತ್ತಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇದು ಬಡ ಜನರಿಗೆ ಸಂಬಂಧಪಟ್ಟ ವಿಚಾರ ಈ ಅಂಶದ ಬಗ್ಗೆ ಈವೊಂದು ಕಾರ್ಯಕ್ರಮದ ಬಗ್ಗೆ ಅವರು ಆಸಕ್ತಿಯನ್ನು ವಹಿಸಲಿಲ್ಲ. ಹಳ್ಳಿಗಳಲ್ಲಿ ಎಷ್ಟು ಸೈಟುಗಳನ್ನು ಕೊಡಲಾಗಿದೆ ಎಂಬುದನ್ನು ರಿವ್ಯೂ ಮಾಡಿಲ್ಲ. ಮನೆಗಳಿಗೆ ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಹಣವನ್ನು ಕೊಡಬೇಕು ಎನ್ನುವ ಬಗ್ಗೆ ರಿವ್ಯೂ ಇಲ್ಲ. ಹರಿಜನರಿಗೆ ಅನುಕೂಲವಾಗುವಂತೆ ನಾವು ಅಧಿಕಾರದಲ್ಲಿದ್ದಾಗ ತೋಟಿ ತಳವಾರರಿಗೆ ತಿಂಗಳಿಗೆ ೭೫ ರೂಪಾಯಿಗಳಂತೆ ಮಂಸಾಶನ ಮಾಡಿದ್ದೇವೆ. ಅನೇಕ ತಾಲ್ಲೂಕುಗಳಲ್ಲಿ ಇನ್ನೂ ಅದನ್ನು ಕೊಟ್ಟಿಲ್ಲ. ಅದರ ಬಗ್ಗೆ ರಿವ್ಯೂ ಮಾಡಿಲ್ಲ. ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಮಾನ್ಯ ಏಕಾಂತಯ್ಯನವರು ಮಾಡಿದ ಹಾಗೆ ಬೇರೆ ಕಡೆ ಮಾಡಿದ್ದರೆ ಆ ಜನರಿಗೆ ಖಂಡಿತವಾಗಿಯೂ ಇದರ ಪ್ರಯೋಜನ ತಲುಪುತ್ತಿತ್ತು. ಅದು ಆಗಿದ್ದರೆ ನಾವು ಹೇಳುತ್ತಿರಲಿಲ್ಲ, ಅದನ್ನು ಮಾಡುವ ಕಡೆಗೆ ಗಮನಹರಿಸಿಲ್ಲ ಅದನ್ನು ಕಾಲ ಕಾಲಕ್ಕೆ ರಿವ್ಯೂ ಮಾಡಿದ್ದರೆ ಮಂತ್ರಿಗಳ ಗಮನಕ್ಕೆ ಬರುತ್ತಿತ್ತು. ಇದರ ಅರ್ಥ ಮಂತ್ರಿಗಳು ರಿವ್ಯೂ ಮಾಡಿಲ್ಲ ವೆನ್ನುವುದು ಗೊತ್ತಾಯಿತು. ಇವತ್ತು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಹೆಚ್ಚು ಗಮನ ಕೊಟ್ಟು ನಮ್ಮ ಸರ್ಕಾರ ಅದನ್ನು ಪುನಃ ಜಾರಿಗೆ ತರಬೇಕೆಂದು ತಂದಿದೆ. ಭೂ ಸುಧಾರಣೆಯ ಬಗ್ಗೆ ಹೇಳುವುದಾದರೆ, ಆರು ವರ್ಷಗಳ ಅವಧಿಯಲ್ಲಿ ತಾವು ಏನು ಮಾಡಿದ್ದೀರಿ? ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆ ಉತ್ತರ ಕನ್ನಡ ಜಿಲ್ಲೆ ಹಾಗೂ ಬೆಳಗಾಂ ಜಿಲ್ಲೆಗಳಲ್ಲಿ ಇದು ಅತ್ಯಂತ ಮಹತ್ವವಾದ ಕಾನೂನು. ಅದನ್ನು ಜಾರಿಗೆ ತಂದಿದ್ದರೆ ಎಲ್ಲಾ ಜನರಿಗೂ ಹೆಚ್ಚಿನ ಸಹಾಯವಾಗುತ್ತಿತ್ತು. ಇಡೀ ಕರ್ನಾಟಕ ರಾಜ್ಯದಲ್ಲಿ ೮ ಲಕ್ಷದ ೪೮ ಸಾವಿರ ಗೇಣಿದಾರರು ಹೆಚ್ಚು ಕಡಿಮೆ ಇದ್ದರು. ಅದರಲ್ಲಿ ನನ್ನ ಕಾಲದಲ್ಲಿಯೇ ಸುಮಾರು ಕೇಸುಗಳು ಡಿಸ್‌ಪೋಸ್ ಆಗಿತ್ತು. ೧೯೭೪ರಲ್ಲಿ ಹೆಚ್ಚಿನ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಮಾಡಿ ಹೆಚ್ಚು ಕೇಸುಗಳನ್ನು ತೆಗೆದುಕೊಂಡು ಗೇಣಿದಾರರಿಗೆ ಲಾಭವಾಗಬೇಕೆನ್ನುವ ದೃಷ್ಟಿಯಿಂದ ಕೆಲಸ ಮಾಡಿದ್ದೇವೆ. ಆ ಸಂದರ್ಭದಲ್ಲಿ ೮ ಲಕ್ಷದ ೧೧ ಸಾವಿರದ ೭೩೪ ಕೇಸುಗಳು ಡಿಸ್‌ಪೋಸ್ ಆದವು. ಕೇವಲ ೨ ಸಾವಿರ ಕೇಸುಗಳು ಮಾತ್ರ ಇದ್ದವು. ಅದಕ್ಕಿಂಥ ಹೆಚ್ಚು ಕೇಸುಗಳು ಇರಲಿಲ್ಲ. ಅಪಲೇಟ್ ಟ್ರಿಬ್ಯೂನಲ್‌ಗಳನ್ನು ಮಾಡಬೇಡಿಯೆಂದು ನಾನು ಶ್ರೀಮತಿ ನಾಗರತ್ನಮ್ಮನವರು, ಬಂಗಾರಪ್ಪನವರು ಬಡಿದುಕೊಂಡೆವು, ಇದರಿಂದ ಗೇಣಿದಾರರಿಗೆ ಅನ್ಯಾಯವಾಗುತ್ತದೆ. ಕೇಸುಗಳು ಪುನಃ ವಾಪಸ್ಸು ಬರುತ್ತವೆ, ಸದಸ್ಯರುಗಳ ಮೇಲೆ ಒತ್ತಡ ತಂದು ತೀರ್ಮಾನ ಮಾಡುವಾಗ ಉಲ್ಟ ಆಗುತ್ತವೆಂದು ಹೇಳಿದೆವು. ಅದೇ ರೀತಿ ಎಷ್ಟೋ ಗೇಣಿದಾರರು ಅನ್ಯಾಯಕ್ಕೆ ಒಳಗಾದರು. ಟ್ರಿಬ್ಯೂನಲ್‌ಗಳಲ್ಲಿ ಖಾಯಂ ಆಗಿದ್ದಂತಹ ಕೇಸುಗಳು ಅಪೆಲೇಟ್ ಟ್ರಿಬ್ಯೂನಲ್‌ಗೆ ರೆಫರ್ ಆಗಿ ಅನ್ಯಾಯ ವಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಗೇಣಿದಾರರ ವಿರುದ್ಧ ಕೇಸುಗಳು ಆಗಿವೆ.

ಅಲ್ಲಿ ನೀವೇನು ಸದಸ್ಯರನ್ನು ನಾಮಿನೇಟ್ ಮಾಡುತ್ತೀರಿ, ಆ ಸದಸ್ಯರು ಕಮಿಟೆಡ್ ಅಲ್ಲದೇ ಹೋದರೆ, ಅವರು ಯಾವ ಪಕ್ಷದವರೇ ಇರಲಿ, ಅವರಿಗೆ ಟೆನೆನ್ಸಿ ಆ್ಯಕ್ಟ್ ಬಗ್ಗೆ ಆಸಕ್ತಿ ಇಲ್ಲದೇ ಹೋದರೆ ಖಂಡಿತವಾಗಿ ಈ ಆ್ಯಕ್ಟ್ ವಿರುದ್ಧ ಅವರು ವರ್ತನೆ ಮಾಡುತ್ತಾರೆ ಮತ್ತು ಅನೇಕ ಕಡೆಗಳಲ್ಲಿ ಲಂಚ ತೆಗೆದುಕೊಂಡು ತೀರ್ಮಾನವನ್ನು ಮಾಡಿ ಇವತ್ತಿನ ದಿವಸ ಅನೇಕ ಟೆನೆಂಟ್ಸ್ ಬೀದಿಪಾಲಾಗಿ

ದ್ದಾರೆ. ಇದು ತಮಗೂ ಕೂಡ ಗೊತ್ತಿದೆ. ಅನ್ಯಾಯ ಆಗುತ್ತಿದೆ ಎಂದು ಗೊತ್ತಿದ್ದರೂ ಕೂಡ ತಾವು ಮನಸ್ಸು ಮಾಡಲಿಲ್ಲ. ಇದೇ ರೀತಿಯಲ್ಲಿ ಹೋದಿರಿ. ಇವತ್ತು ಸಾವಿರಾರು ಜನರಿಗೆ ಇದರಿಂದ ತೊಂದರೆಯಾಗಿದೆ. ಅವಕ್ಕೆ ಯಾವರೀತಿಯಾಗಿ ನಮ್ಮ ಸರ್ಕಾರದವರು ಪರಿಹಾರ ನೀಡುತ್ತಾರೆ ಎಂಬುದನ್ನು ನಾವು ನೋಡಬೇಕಾಗಿದೆ ಏಕೆಂದರೆ ಇದು ಒಂದು ಬಹಳ ಜಟಿಲವಾದ ಸಮಸ್ಯೆ. ಮತ್ತು ಟ್ರಿಬ್ಯೂನಲ್ ಕೂಡ ಟೆನೆನ್ಸಿಯನ್ನು ಖಾಯಂ ಮಾಡುವುದಕ್ಕೆ ಅತ್ಯಂತ ಪ್ರಾಮಾಣಿಕ ದಕ್ಷರೂ ಮತ್ತು ಯಾರಿಗೆ ಇದರ ಬಗ್ಗೆ ಆಸಕ್ತಿ ಇದೆ, ಅಂತಹವರಿಗೆ ಮಾತ್ರ ಅವಕಾಶ ಕೊಟ್ಟು, ಅವರನ್ನು ಸದಸ್ಯರು ಎಂದು ಹಾಕಬೇಕಾಗುತ್ತದೆ. ಹಿಂದೆ ಸುಮಾರು ೪.೮೦,೯೬೭ ಮಂದಿ ಟೆನೆಂಟ್‌ಗಳಿಗೆ ನಾವು ಕನ್‌ಫರ್ಮೇಶನ್ ಮಾಡಿಕೊಟ್ಟಿದ್ದೇವೆ. ಆಗ ೧,೮೯,೧೩೦ ಎಕರೆ ಸರ್‌ಪ್ಲಸ್ ಲ್ಯಾಂಡ್‌ನ್ನು ಹಂಚಿದ್ದೇವೆ. ಆದರೆ ಈ ಆರು ವರ್ಷಗಳಲ್ಲಿ ತಾವು ಎಷ್ಟು ಡಿಸ್ಟ್ರಿಬ್ಯೂಟ್ ಮಾಡಿದ್ದೀರಿ ಎಂದರೆ ಕೇವಲ ೯ ಸಾವಿರ ಎಕರೆ ಮಾತ್ರ. ಇದು ನಾನು ಹೇಳುವುದಲ್ಲ. ನಿಮ್ಮ ೧೯೮೭-೮೮ರ ವಾರ್ಷಿಕ ವರದಿ ಇದೆ. ಅದರಲ್ಲಿ ಕೊಟ್ಟಿರುವುದು ಮತ್ತು ಅದನ್ನು ತಾವು ಪ್ರಿಂಟ್ ಮಾಡಿದ್ದುದು ಇದೆ. ಇದು ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ ನಾವು ಕೆಲಸ ಮಾಡಿದ್ದುದು, ನೀವು ಬಂದಮೇಲೆ ಪ್ರಿಂಟ್ ಮಾಡಿದ್ದುದು. ಇದನ್ನು ನೋಡಿದರೆ ಎಷ್ಟರಮಟ್ಟಿಗೆ ಆಸಕ್ತಿವಹಿಸಿ ಭೂಸುಧಾರಣೆ ಕಾನೂನನ್ನು ನೀವು ಜಾರಿಗೆ ತಂದಿದ್ದೀರಿ ಎನ್ನತಕ್ಕದ್ದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅನೇಕ ಕಡೆಗಳಲ್ಲಿ ಏನು ೨೫-೨೬ ಸಾವಿರ ಟೆಂಟ್‌ಗಳಿಗೆ ಭೂಮಿಯನ್ನು ಹಂಚಿದ್ದೆವು ಅವರಿಗೆ ಡಿಸ್‌ಪೋಸಸ್ ಮಾಡಿದರು. ಪೋಲೀಸ್ ಕೇಸ್‌ಗಳು ಆದವು. ಅವರನ್ನು ಕೇಳುವವರು ಯಾರೂ ಇರಲಿಲ್ಲ. ಕಂಪ್ಲೇಂಟ್ ಕೊಟ್ಟರೂ ಕೂಡ ಯಾರೂ ಇದರ ಬಗ್ಗೆ ಆಸಕ್ತಿ ವಹಿಸಲಿಲ್ಲ. ಏಕೆಂದರೆ ಆಗ ಸರ್ಕಾರದ ರಚನೆ ಆರೀತಿ ಇತ್ತು. ಅವರಲ್ಲಿ ಒಬ್ಬರು ಏಕಾಂತಯ್ಯ ಇರಬಹುದು, ಒಬ್ಬರು ಸಿಂಧ್ಯ ಇರಬಹುದು. ಆದರೆ ಕೆಲವು ವೆಸ್ಟೆಡ್ ಇಂಟರೆಸ್ಟ್‌ನ ಜನ ಇದ್ದರು. ಇವರು ಎಲ್ಲಾ ಕಡೆಯೂ ಇರುತ್ತಾರೆ, ಒಂದು ಚೂರು ಹೆಚ್ಚು ಇರುತ್ತಾರೆ ಅಥವಾ ಒಂದು ಚೂರು ಕಡಿಮೆ ಇರುತ್ತಾರೆ. ಡಾಕ್ಟರ್ ಅಂಬೇಡ್ಕರ್ ಅವರು ಒಂದು ಮಾತನ್ನು ಹೇಳಿದ್ದಾರೆ.

'ಕಾನೂನು ಎಷ್ಟೇ ಸರಿಯಾಗಿದ್ದರೂ ಕೂಡ ನಡೆಸಿಕೊಂಡು ಹೋಗತಕ್ಕ ಜನ ಸರಿಯಾಗಿ ಇಲ್ಲದೇ ಹೋದರೆ ಆ ಕಾನೂನು ಕೆಟ್ಟು ಹೋಗುತ್ತದೆ'

ಈ ಮಾತನ್ನು ಅವರು ಹೇಳಿದ್ದಾರೆ. ಹಾಗೆಯೇ ಭೂಸುಧಾರಣೆ ಕಾನೂನು ಎಷ್ಟು ಉಪಯುಕ್ತ ಇದ್ದರೂ ಕೂಡ ಅದನ್ನು ನಡೆಸಿಕೊಂಡು ಹೋಗತಕ್ಕ ಸರ್ಕಾರ ಏನಿತ್ತು ಅದು ಸರಿಯಾಗಿ ಇರಲಿಲ್ಲ ಆದ್ದರಿಂದ ಒಂದನ್ನು ಕೂಡ ಜಾರಿಗೆ ತರುವುದಕ್ಕೆ ನಿಮಗೆ ಆಗಲಿಲ್ಲ. ಈ ಭೂಸುಧಾರಣೆ ಕಾನೂನನ್ನು ಏಕೆ ಸರಿಯಾಗಿ ಇಂಪ್ಲಿಮೆಂಟ್ ಮಾಡಲಿಲ್ಲ ಎಂದರೆ ಇರತಕ್ಕ ಸದಸ್ಯರು ಮಾಡಲು ಬಿಡುತ್ತಿರಲಿಲ್ಲ. ಎಂ.ಎಲ್.ಎ. ಗಳು ಮಾಡಕೊಡುತ್ತಿರಲಿಲ್ಲ. ಅಥವಾ ಅಧಿಕಾರಿಗಳಿಗೆ ಪದೇ ಪದೇ ಚುಚ್ಚಿ ಹೇಳಿ ಮಾಡಿಸತಕ್ಕಂಥ ಸಾಮರ್ಥ್ಯ ಕೂಡ ಇರಲಿಲ್ಲ. ಯಾರಿಗಾದರೂ ಮಾಡಿ ಎಂದು ಹೇಳಿದರೆ ಆ ಎಂ.ಎಲ್.ಎ. ಮರುದಿವಸವೇ ಅವನನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಸ್ ತೆಗೆದುಕೊಂಡು ಬರುತ್ತಿದ್ದ. ಈಗ ನಮ್ಮ ಮಾತು ಕೇಳುವುದಿಲ್ಲ, ಆದ್ದರಿಂದ ಟ್ರಾನ್ಸ್‌ಫರ್ ಮಾಡಿ ಎಂದು ಹೇಳುತ್ತಿದ್ದರು. ನೀವು ಪಾಪ ಈತ ಎಲ್ಲಿ ಬಿಟ್ಟುಹೋಗುತ್ತಾನೋ ಎಂದು ಟ್ರಾನ್ಸ್‌ಫರ್ ಮಾಡಿದ್ದೋ ಮಾಡಿದ್ದುದು. ಎಲ್ಲಾ ಟೆನೆಂಟ್ಸ್ ಕೇಸ್‌ಗಳು ಡಿಸ್‌ಪೋಸ್ ಮಾಡುವುದಕ್ಕಿಂತಲೂ ನಿಮ್ಮ ಗಮನ ಯಾವ ಕಡೆಗೆ ಇತ್ತು ಎಂದರೆ ಟ್ರಾನ್ಸ್‌ಫರ್, ಪೋಸ್ಟಿಂಗ್ಸ್ ಮಾಡುವ ಕಡೆಗೆ ಇತ್ತು. ನಾವು ಮಾಡಿದ್ದು ನಿಮಗೆ ಗೊತ್ತಿದೆ. ನಾನು ಅಧಿಕಾರ ಮಾಡಿದಮೇಲೆ, ಐದಾರು ವರ್ಷ ಮಂತ್ರಿಯಾದಮೇಲೆ ಏಳು ವರ್ಷ ನಿಮ್ಮ ಕೈಯಲ್ಲಿ ಬಯ್ಸಿಕೊಂಡು ಈಗ ಇಲ್ಲಿ ನಿಮ್ಮನ್ನು ಬಯ್ಯುವುದಕ್ಕೆ ಬಂದಿದ್ದೇನೆ. ನಾನು ಮಾಡಿದ್ದು ನಿಮಗೆ ಗೊತ್ತಿದೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಯಾರೇ ಇರಲಿ ಇದಕ್ಕೆ ಒಂದು ಕಮಿಟ್‌ಮೆಂಟ್ ಬೇಕು. ಈ ಲ್ಯಾಂಡ್ ರಿಫಾರ್ಮ್ ಆ್ಯಕ್ಟ್‌ನಲ್ಲಿ ಈ ಕಮಿಟ್‌ಮೆಂಟ್ ಇಲ್ಲದೇ ಹೋದರೆ ಅದನ್ನು ಆಚರಣೆಗೆ ತರುವುದಕ್ಕೆ ಆಗುವುದಿಲ್ಲ ಅದಕ್ಕಾಗಿ ಅನೇಕ ಬೆನಿಫಿಷಿಯರೀಸ್‌ಗೆ ಏನು ಭೂಮಿಯನ್ನು ಹಂಚಲಾಗಿತ್ತು, ಹೀಗೆ ಹಂಚಿದ ಭೂಮಿಯನ್ನು ಕೆಲವು ಭೂಮಾಲೀಕರು ಕಸಿದುಕೊಂಡುಬಿಟ್ಟಿದ್ದಾರೆ. ಅದನ್ನು ಇವತ್ತು ರೆಸ್ಟೋರ್ ಮಾಡಬೇಕಾದರೆ ಇನ್ನೊಂದು ದೊಡ್ಡ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆಗುತ್ತದೆ ನಾಳೆ ಅವರಿಂದ ಕಸಿದು ಕೊಡುವುದಕ್ಕೆ ಹೋದರೆ ಪುನಃ ನಿಮ್ಮ ಕಡೆ, ಇನ್ನೊಂದು ಕಡೆಯಿಂದ, ಅನೇಕ ಕಡೆಯಿಂದ ಒತ್ತಡ ಬರುತ್ತದೆ.

ನಮ್ಮಲ್ಲಿಂದಲೂ ಒತ್ತಡ ಬರಬಹುದು, ನಿಮ್ಮಲ್ಲಿಂದಲೂ ಬರಬಹುದು ಒಂದಾವೇಳೆ ಬರಲಿಲ್ಲ ಎಂದು ಹೇಳಿದರೆ, ಇದನ್ನು ಏಕೆ ಇಂಪ್ಲಿಮೆಂಟ್ ಮಾಡಲಿಲ್ಲ. ಈ ಎರಡೂವರೆ ಲಕ್ಷ ಎಕರೆಯನ್ನು ಸ್ವಾಧೀನದಲ್ಲಿ ಪಡೆದುಕೊಳ್ಳಬೇಕಾಗಿತ್ತು. ನೀವು ಇದನ್ನು ಬಿಗಿಯಾಗಿ ಇಂಪ್ಲಿಮೆಂಟ್ ಮಾಡಲಿಲ್ಲ. ಇದರಿಂದ ಎಲ್ಲರೂ ಟ್ರಿಬ್ಯೂನಲ್‌ಗೆ ಹೋದರು, ಅಲ್ಲಿಯ ತೀರ್ಮಾನದ ನಂತರ ಸ್ವಾಧೀನಕ್ಕೆ ಪಡೆದು,

ಕೊಂಡರು. ಅದಕ್ಕೆ, ದಯವಿಟ್ಟು ನಾವು ಮಾಡುವುದಿಲ್ಲ ಎಂದು ಹೇಳುವುದಕ್ಕೆ ಹೋಗಬೇಡಿ‌ಗಿ ನಿಮ್ಮಲ್ಲಿ ಈ ಮನಸ್ಸು ಇರಲಿಲ್ಲ. ಇವತ್ತು ನಮ್ಮ 20 ಅಂಶದ ಕಾರ್ಯಕ್ರಮ ಸ್ಪಷ್ಟವಾಗಿ ಆಚರಣೆಯಲ್ಲಿ ತರುತ್ತೇವೆ, ಭೂಸುಧಾರಣಾ ಕಾನೂನು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದ್ದೇವೆ. ಇದಕ್ಕೆ ಯಾವರೀತಿಯಿಂದ ಬೆಂಬಲ, ಸಹಾಯ ಬೇಕೋ, ಆ ರೀತಿಯ ಬೆಂಬಲ ಮತ್ತು ಸಹಾಯವನ್ನು ತೆಗೆದುಕೊಳ್ಳುತ್ತೇವೆಂದು ಈ ಸದನದ ಮುಖತಃರ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—೫ ವರ್ಷ ಟೈಮ್ ಸಿಕ್ಕಿದೆ. ಎರಡೂವರೆ ಲಕ್ಷ ಎಕರೆ ಜಮೀನು ಹಂಚಿ. ಲ್ಯಾಂಡ್ ಟ್ರಿಬ್ಯೂನಲ್ ಬಗ್ಗೆ ಮಾತನಾಡಬೇಕೆಂದರೆ, ಜನತಾ ದಳದಲ್ಲೇನು, ಪಟ್ಟಭದ್ರ ಹಿತಾಸಕ್ತಿಗಳು ಆ ಕಡೆಯಲ್ಲೂ ಕುಳಿತಿದ್ದಾರೆ, ಈ ಕಡೆಯಲ್ಲೂ ಕುಳಿತಿದ್ದಾರೆ. ಆದರೆ ನಮಗೆ ಇಲ್ಲಿ ಪಂಗನಾಮ ಹಾಕಿದರೆ, ನಿಮಗೆ ಡೆಲ್ಲಿಯಲ್ಲಿ ಹಾಕಿದ್ದಾರೆ. ಸುಮ್ಮನೆ ಮಾತನಾಡುವುದು ಬೇಡ. ಬಡವರಿಗೆ ಸೈಟು ಹಂಚುವುದರ ಬಗ್ಗೆ ಹಿಂದೆ ನೀವೇ ಹೇಳಿದ್ದೀರಿ.........

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸಿಂಧ್ಯಾರವರ ಬಾಯಲ್ಲಿಯೇ ಬಂತು "Vested interest is a class" ಎಂದು. So he has conceded to the vested interests.

ಶ್ರೀ ಪಿ. ಜಿ ಆರ್. ಸಿಂಧ್ಯ.—ಹೌದು. ನಾನು ಮಂತ್ರಿಯಾಗಿದ್ದಾಗ ಬಡವರಿಗೆ ಭೂಮಿ ಹಂಚುವುದನ್ನು ತಡೆಯಿರಿ ಎಂದು ನೀವೇ ಹೇಳಿದ್ದೀರಲ್ಲ. ಅದಕ್ಕೇನು ಹೇಳುತ್ತೀರಿ? ಪುನಃ ನೀವೇ ಹೇಳುತ್ತಿದ್ದೀರಿ. ನೀವು ಅದನ್ನು ಮರೆತುಬಿಟ್ಟಿದ್ದೀರೆಂದು ಕಾಣುತ್ತದೆ. ಬಡವರಿಗೆ ಹೊಸಕೋಟೆ ತಾಲ್ಲೂಕಿನಲ್ಲಿ ಭೂಮಿ ಹಂಚುವುದು ಬೇಡ ಎಂದು ನೀವೇ ನನಗೆ ಹೇಳಿದ್ದೀರಿ. ಈಗ ಸುಮ್ಮನೆ ಮಾತನಾಡುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಸರ್ಕಂಸ್ಟೆನ್ಸಸ್‌ನಲ್ಲಿ ಬರೆದಿದ್ದಾರೋ, ಅದನ್ನು ಇಲ್ಲಿ ತಂದು ಹೇಳುತ್ತಿದ್ದಾರೆ.

SRI P.G.R. SINDHIA.—I am not accusing my hon'ble friend. What I am trying to bring in here is the so-called vested interest is there in the entire system. It is not that easy as we talk here.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವಕ್ಕೆ ಸರ್ಕಾರದ ಕಮಿಟ್‌ಮೆಂಟ್ ಬೇಕು.........

ಶ್ರೀ ಪಿ.ಜಿ.ಆರ್. ಸಿಂಧ್ಯ.—ಪಟ್ಟಭದ್ರ ಹಿತಾಸಕ್ತಿಗಳು ಎಲ್ಲೂ ಇಲ್ಲವೆಂದಿದ್ದರೆ ಇವತ್ತು ಇಲ್ಲಿ ನೀವು ಮೊದಲನೇ ಬೆಂಚ್‌ನಲ್ಲಿ ಕುಳಿತುಕೊಳ್ಳಬೇಕಾಗಿತ್ತು.........

ಶ್ರೀ ಬಸವರಾಜ ರಾಯರೆಡ್ಡಿ.—ಒಂದನೇ ಬೆಂಚಿನಿಂದ ಎರಡನೇ ಬೆಂಚಿಗೆ ಹೋಗಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲೋಕಲ್ ಅಥಾರಿಟಿ ಬಗ್ಗೆಯೂ ಕೂಡ ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೇವೆ. ಮಂಡಲ್ ಪಂಚಾಯಿತಿ, ಜಿಲ್ಲಾಪರಿಷತ್ ಚುನಾವಣೆಗಳು ನಡೆದು ೨-೩ ವರ್ಷಗಳಾಯಿತು. ಎಲ್ಲಾ ಮಂಡಲ್ ಪಂಚಾಯಿತಿಗಳೂ, ಜಿಲ್ಲಾಪರಿಷತ್‌ಗಳೂ ಅಸ್ತಿತ್ವದಲ್ಲಿ ಇವೆ. ಹಿಂದೆ ಆ ಕಡೆಯಲ್ಲಿದ್ದಾಗ ಕೆಲವು ಪ್ರಶ್ನೆಗಳನ್ನು ನಾವು ಕೇಳಿದ್ದೆವು. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳಿಗೆ ನಾವು ಎಷ್ಟರಮಟ್ಟಿಗೆ ಸಹಾಯ ಮಾಡಬೇಕೋ ಅಷ್ಟು ಮಾಡಿದರೆ ಸರಿ, ಇಲ್ಲದೇ ಹೋದರೆ ನಾಳೆ ಹಳ್ಳಿಯಲ್ಲಿರತಕ್ಕ ಜನರಿಗೆ ತೊಂದರೆ ಕೊಡತಕ್ಕ ಸಂಸ್ಥೆಗಳಾಗಬಾರದು ಎಂದು ಸ್ಪಷ್ಟಪಡಿಸಿದ್ದೇವೆ. ಶ್ರೀಮತಿ ನಾಗರತ್ನಮ್ಮನವರು ಮತ್ತು ಇನ್ನೂ ಅನೇಕ ಸದಸ್ಯರು ಹಳೆಯ ವ್ಯವಸ್ಥೆರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ತಾಲ್ಲೂಕು ಬೋರ್ಡ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದವು ಎಂದು ಹೇಳಿದರು. ಇವೊತ್ತು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳು ಪಾರ್ಟಿ ಬೇಸಿಸ್ ಮೇಲೆ ನಡೆಯುತ್ತಿವೆ. ಬಡವರ ಕೆಲಸಕ್ಕಾಗಿ ಹೋದಾಗ, ಪಾರ್ಟಿ ದೃಷ್ಟಿಯಿಂದ ನೋಡುತ್ತಾರೆ. ಒಬ್ಬ ಮನುಷ್ಯ ಒಮ್ಮೆ ಜನತಾ ಪಾರ್ಟಿಗೆ ಓಟು ಕೊಟ್ಟಿರಬಹುದು, ಎಂ.ಎಲ್.ಎ. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಓಟು ಕೊಟ್ಟಿರಬಹುದು, ಇನ್ನೊಂದು ಚುನಾವಣೆಯಲ್ಲಿ ಜನತಾ ದಳಕ್ಕೆ ಓಟು ಕೊಟ್ಟಿರಬಹುದು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಜನತೆ ಕೊಟ್ಟಂಥ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲ.

ಯಾವ ರೀತಿಯಾಗಿ ಒಂದು ಹಿಡಿತದಲ್ಲಿ ಅವರಿಗೆ ತರಬೇಕು, ಅಥವಾ ಈ ಬಡವರಿಗೆ ಈ ಒಂದು ಹೆರಾಸ್‌ಮೆಂಟ್ ಏನಾಗುತ್ತಿದೆ ಅದನ್ನು ತಪ್ಪಿಸಬೇಕೆನ್ನತಂಥಾದ್ದರ ಬಗ್ಗೆ ಕೂಡಾ ಚಿಂತನೆ ಮಾಡುತ್ತೇವೆ

ಎಂಬ ಮಾತನ್ನು ಅವರು ಹೇಳಿದ್ದಾರೆ. ಇವತ್ತು ಒಂದೇ ಒಂದು ಉದಾಹರಣೆ ಹೇಳಬೇಕಾದರೆ, ನಮ್ಮಲ್ಲಿ ಎಂಪಾಡ್ ಎಂಬ ಒಂದು ವಿಲೇಜ್ ಇದೆ. ಅಲ್ಲಿ ಒಬ್ಬ ಫ್ಲೋರ್‌ಮಿಲ್‌ಗೆ ಅಪ್ಲಿಕೇಷನ್ ಕೊಟ್ಟಿದ್ದಾನೆ. ಅಲ್ಲಿ ಮಂಡಲದ ಅಧ್ಯಕ್ಷರು ಜನತಾ ಪಕ್ಷದವರು. ಅಧ್ಯಕ್ಷರಿಗೂ ಇದರಲ್ಲಿ ಅಷ್ಟು ಆಸಕ್ತಿ ಇಲ್ಲ. ಹಿಂದೆ ಯಾರೋ ಒಬ್ಬರು ಶಾಸಕರಾಗಿದ್ದವರು, ಮಂತ್ರಿಗಳೂ ಆಗಿದ್ದರು. ಇಂತಹವನಿಗೆ ನೀವು ಇಲ್ಲಿ ಪರ್ಮಿಷನ್ ಕೊಡಬೇಡಿ ಎಂದು ಹೇಳಿದರು, ಆದರೆ ಅವನು ಸಿಂಡಿಕೇಟ್ ಬ್ಯಾಂಕ್‌ನಿಂದ ೬೫ ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡು ಫ್ಲೋರ್ ಮಿಲ್ ಮಾಡುವುದಕ್ಕೆ ಹೊರಟಿದ್ದ. ಅವನಿಗೆ ಎಲೆಕ್ಟ್ರಿಸಿಟಿ ಕನೆಕ್ಷನ್ ಸಿಗಬೇಕೆಂದರೆ, ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ಗೆ ಮಂಡಲ್‌ನಿಂದ ನೋ ಆಬ್‌ಜೆಕ್ಷನ್ ಸರ್ಟಿಫಿಕೇಟ್ ಹೋಗಬೇಕು. ಆದರೆ ಇದಕ್ಕೆ ನೋ ಆಬ್ಜೆಕ್ಷನ್ ಕೊಡಬೇಡಿ ಎಂದು ಹಿಂದಿನ ಮಂತ್ರಿಗಳು ಬರೆದ ಮೇಲೆ ಮಂಡಲದ ಅಧ್ಯಕ್ಷ ಹೆದರಿಕೊಂಡು ರೆಫ್ಯೂಸ್ ಮಾಡಿಬಿಟ್ಟ. ರೆಫ್ಯೂಸ್ ಮಾಡಿದ ಮೇಲೆ ಜಿಲ್ಲಾಪರಿಷತ್ ಆಕ್ಟ್ ಪ್ರಕಾರ ಅವನು ಸ್ಟ್ಯಾಂಡಿಂಗ್ ಕಮಿಟಿಗೆ ಅಪೀಲ್ ಹೋಗಬೇಕು, ಅಪೀಲ್ ಹೋದ ಮೇಲೆ ಅಲ್ಲಿ ವೈಸ್‌ಪ್ರೆಸಿಡೆಂಟ್ ಅದರ ಚೇರ್ಮನ್. ಅವನಿಗೂ ಒಂದು ಇವರು ಹೇಳಿದರು ಇದು ಪಾರ್ಟಿ ಬೇಸಿಸ್ ಮೇಲಿದೆ ತಕ್ಷಣ ಪರ್ಮಿಷನ್ ಕೊಟ್ಟರೆ ನಮಗೆಲ್ಲಾ ತೊಂದರೆಯಾಗುತ್ತದೆ, ನೀವು ಪರ್ಮಿಷನ್ ಕೊಡಬೇಡಿ ಎಂದು ಹೇಳಿದರು, ಇಂದಿಗೆ ಮೂರು ವರ್ಷ ಆಯಿತು. ೬೫ ಸಾವಿರ ರೂಪಾಯಿ ಸಾಲ ಹೋಗಿ, ಇವತ್ತು ಬಡ್ಡಿ, ಗಂಟು ಎಲ್ಲಾ ಸೇರಿ ೧ ಲಕ್ಷದ ೪೦ ಸಾವಿರ ಆಗಿ, ಅಟ್ಯಾಚ್‌ಮೆಂಟ್ ಬಂದಿದೆ. ಇನ್ನೂ ಪರ್ಮಿಷನ್ ಇಲ್ಲ. ಇದಕ್ಕಾಗಿ ನಾವು ಡಿಸೆಂಟ್ರಲೈಸೇಶನ್ ಮಾಡಿದ್ದಲ್ಲ. ಜನರಿಗೆ ಸಹಾಯ ಆಗಬೇಕೆಂದು ಡಿಸೆಂಟ್ರಲೈಸೇಶನ್ ಆಫ್ ಪವರ್ ಮಾಡಿದ್ದುದು. ಜನಗಳಿಗೆ ಅನುಕೂಲ ಆಗಬೇಕು, ಅವರಿಗೆ ಸಹಾಯ ಆಗಬೇಕು, ಅಲ್ಲಿನ ಸಮಸ್ಯೆಗಳು ಅಲ್ಲೇ ಬಗೆಹರಿಯಬೇಕೆಂಬ ದೃಷ್ಟಿಯಿಂದ ಈ ಸದನ ಎಲ್ಲಾ ಒಪ್ಪಿಕೊಂಡು ಡಿಸೆಂಟ್ರಲೈ-ಸೇಷನ್ ಮಾಡಿತು. ಆದರೆ ಇವತ್ತು ಡಿಸೆಂಟ್ರಲೈಸೇಷನ್ ಆಫ್ ಕರಪ್ಷನ್ ಆಗಿದೆ. ಎಲ್ಲಾ ಹಂತದಲ್ಲಿ ಇಂತಹದು ಇಲ್ಲ ಎಂದು ಹೇಳುವ ಹಾಗೆ ಇಲ್ಲ. ಇವತ್ತು ಏನಾಗಿದೆ ಎಂದರೆ, ಇಲ್ಲಿರತಕ್ಕಂಥ ಸದಸ್ಯರು ಯಾರೂ ಕೂಡಾ ನಮಗೆ ಅಗೌರವ ಮಾಡುತ್ತಿದ್ದಾನೆ ಎಂದು ಭಾವನೆ ಇಟ್ಟುಕೊಳ್ಳಬಾರದು. ಇವತ್ತು ಜಿಲ್ಲಾ ಪರಿಷತ್ ಮೆಂಬರ್ ಮುಂದೆ ಎಂ. ಎಲ್. ಎ. ಏನೇನೂ ಅಲ್ಲ. ಇವತ್ತು ಎಲ್ಲರಿಗೂ ಕೂಡಾ ಹೆದರಿಕೆ ಹಾಕುತ್ತಿದ್ದಾರೆ. ಯಾವುದೇ ಒಂದು ಸಣ್ಣ ಕೆಲಸಕ್ಕೆ ಹೋದರೂ ಕೂಡಾ, ಒಂದು ಸೈಟ್ ಅಲಾಟ್‌ಮೆಂಟ್, ಒಂದು ಮನೆ ಅಲಾಟ್‌ಮೆಂಟ್, ಒಂದು ಬೋರ್‌ವೆಲ್ ಈ ರೀತಿ ಯಾವುದೇ ಒಂದು ಸಣ್ಣ ಕೆಲಸಕ್ಕೆ ಹೋದರೂ ಕೂಡಾ, ಜಿಲ್ಲಾ ಪರಿಷತ್ ಅಧ್ಯಕ್ಷರು, ಮೆಂಬರ್‌ಗಳು ನೀವು ಆ ಎಂ.ಎಲ್.ಗೆ ಓಟು ಕೊಟ್ಟಿದ್ದೀರಿ, ಆ ಎಂ.ಪಿ.ಗೆ ಓಟು ಕೊಟ್ಟಿದ್ದೀರಿ. ಅವರ ಕಡೆಗೆ ಹೋಗಿರಿ ಅವರು ಮಾಡಿಕೊಡುತ್ತಾರೆ ಎಂದು ಹೇಳುತ್ತಿದ್ದಾರೆ. ಅಧಿಕಾರ ನಮ್ಮಲ್ಲಿರಬೇಕು, ಎಂ.ಎಲ್.ಎ.ಗೆ ಹೆಚ್ಚಿನ ಅಧಿಕಾರ ಇರಬೇಕು ಎಂದು ನಾನು ಹೇಳುತ್ತಿಲ್ಲ. ಆದರೆ ಯಾವ ಉದ್ದೇಶಕ್ಕಾಗಿ, ಯಾವ ನೀತಿಗಾಗಿ ನಾವು ಹೊಡೆದಾಡಿ ಬಡಿದಾಡಿ ಡಿಸೆಂಟ್ರಲೈಸೇಷನ್ ಆಫ್ ಪವರ್ ಆಗಬೇಕೆಂದು ಒಪ್ಪಿಕೊಂಡಿದ್ದೇವೆ. ಅದು ಸರಿಯಾಗಿ ಆಗುತ್ತಿಲ್ಲ. ಇದೇ ಮಾತನ್ನು ರಾಜೀವ್ ಗಾಂಧಿಯವರಿಗೂ ಕೂಡಾ ಅಲ್ಲಿ ಹೇಳುತ್ತಿದ್ದಾರೆ. ಆದರೂ ಕೂಡಾ ಇಲ್ಲಿದ್ದಾಗ ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೇವೆ. ಕೆಲವು ಮಾತನ್ನು ಅವರಿಗೂ ಕೂಡ ಬರೆದುಕೊಟ್ಟಿದ್ದೇವೆ. ನಾನು ಇಲ್ಲಿ ಡೆಪ್ಯುಟಿ ಲೀಡರ್ ಎಂದು ಇದ್ದಾಗ ನನ್ನ ಪಕ್ಷದ ವತಿಯಿಂದ ಯಾವ ರೀತಿ ಇದನ್ನು ಬದಲಾವಣೆ ಮಾಡಬೇಕೆಂದು ಸ್ಪಷ್ಟವಾದ ನಿಲುವನ್ನು ಮೆಮೊರಾಂಡಮ್ ಮೂಲಕ ಅವರು ಗುಲ್ಬರ್ಗಾಕ್ಕೆ ಬಂದಿದ್ದಾಗ ಬರೆದು ಕೊಟ್ಟಿದ್ದೇವೆ. ಆದರೆ ಇವತ್ತು ನಾವು ಪುನ: ಪರಿಶೀಲನೆ ಮಾಡತಕ್ಕಂಥ ಕಾಲ ಒಂದು ಸಮಯ ಬಂದಿದೆ. ಈ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಬಗ್ಗೆ ನಾವು ಎಲ್ಲರೂ ಸೇರಿ, ವಿರೋಧ ಪಕ್ಷದವರು ಮತ್ತು ಸರಕಾರದವರು ಸೇರಿ ಎಲ್ಲರೂ ಕೂಡಿ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದು, ಇದರ ಬಗ್ಗೆ ಆಳವಾಗಿ ವಿಚಾರ ಮಾಡತಕ್ಕದ್ದು, ಇದರ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡತಕ್ಕದ್ದು ಅಗತ್ಯವಾಗಿದೆ. ಅಧಿಕಾರಕ್ಕೆ ಬಂದ ಮೂರು ವರ್ಷದಲ್ಲಿ, ಅವುಗಳು ಅಧಿಕಾರಕ್ಕೆ ಬಂದ ಮೇಲೆ, ಏನು ಏನು ಅನಾಹುತಗಳು ಆಗಿವೆ ಅದನ್ನು ಕಣ್ಣೆದುರಿಗೆ ಇಟ್ಟುಕೊಂಡು ಕೆಲಸ ಮಾಡಬೇಕಾಗಿದೆ.

೪-೩೦ ಪಿ. ಎಂ.

ಇವತ್ತು ನಾವು ಅಧಿಕಾರಕ್ಕೆ ಬಂದಿದ್ದೇವೆಂದ ತಕ್ಷಣ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ಡಿಸಾಲ್ವ್ ಮಾಡುತ್ತೇವೆಂದು ಅಲ್ಲ. ಅವುಗಳ ಬಗ್ಗೆ ನಮಗೆ ವಿಶ್ವಾಸ ಇದೆ. ಪಂಚಾಯತ್ ವ್ಯವಸ್ಥೆಯಲ್ಲಿ ನಮಗೆ ನಂಬಿಕೆ ಇದೆ. ಈ ಸಂಸ್ಥೆಗಳ ಬಗ್ಗೆ ನಂಬಿಕೆ ಇದೆಯೋ ಎಂದು

ಕೆಲವು ಪತ್ರಿಕೋದ್ಯಮಿಗಳು ಕೂಡ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಶ್ನೆ ಕೇಳಿದಾಗ ಹೇಳಿದರು. ನಾವು ಯಾವುದನ್ನೂ ಕೂಡ ವಿಂಡಿಕ್ಟೀವ್ ಆಗಿ ನಿರ್ಣಯ ತೆಗೆದುಕೊಳ್ಳುವುದಿಲ್ಲ. ಅವುಗಳ ಮೇಲೆ ನಮಗೆ ವಿಶ್ವಾಸ ಇದೆ. ಅವುಗಳನ್ನು ನಡೆಸಿಕೊಂಡು ಬರುತ್ತೇವೆಂದು ಹೇಳಿದ್ದಾರೆ. ಆ ಸಂಸ್ಥೆಗಳಿಗೆ ಹೆಚ್ಚಿನ ಶಕ್ತಿಯನ್ನು ತುಂಬಲು ಪ್ರಯತ್ನ ಮಾಡುತ್ತೇವೆ. ಅವುಗಳಿಗೆ ಇರತಕ್ಕಂಥ ಅಧಿಕಾರವನ್ನು ಮೊಟಕುಗೊಳಿಸತಕ್ಕಂಥ ಅಥವಾ ಅವುಗಳ ಅಧಿಕಾರವನ್ನು ಕಸಿಯುತಕ್ಕಂಥಾದ್ದೇ ಆಗಲಿ ಮಾಡುವುದಿಲ್ಲವೆನ್ನುವ ಮಾತನ್ನು ಸಹ ಅವರು ಹೇಳಿದ್ದಾರೆ. ಆದರೆ ಇವತ್ತು ಅನೇಕ ಕಡೆ ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ತಮ್ಮ ಪಕ್ಷಗಳ ಬಹುಮತವನ್ನು ಕಳೆದುಕೊಂಡಿವೆ. ಆದರೂ ಕೂಡ ಆ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು ಅಧಿಕಾರದಲ್ಲಿ ಮುಂದುವರಿಯುತ್ತಿದ್ದಾರೆ. ಈ ಸಂಸ್ಥೆಗಳು ಸುಲಲಿತವಾಗಿ ಒಳ್ಳೆಯ ರೀತಿಯಲ್ಲಿ ನಡೆಯಬೇಕು ಎನ್ನುವ ಭಾವನೆ ವಿರೋಧಪಕ್ಷದ ಉಪನಾಯಕರಿಗೆ ಏನಾದರೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ತಕ್ಷಣ ಎಲ್ಲೆಲ್ಲಿ ನಿಮಗೆ ಮೆಜಾರಿಟಿ ಇಲ್ಲವೋ. ಅಲ್ಲಿ ರಾಜೀನಾಮೆ ಕೊಡಲು ಒಂದು ಆದೇಶವನ್ನು ಕೊಟ್ಟರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ತಾವು ಈ ಕೆಲಸ ಮಾಡಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ವಿಶ್ವಾಸ ಬರುತ್ತದೆ. ನಂಬಿಕೆ ಬರುತ್ತದೆ. ನಿಜವಾಗಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದಿದ್ದರೆ ಮೆಜಾರಿಟಿ ಕಳೆದುಕೊಂಡ ತಕ್ಷಣ ರಾಜೀನಾಮೆ ಕೊಟ್ಟು ಬೇರೆಯವರು ಯಾರಾದರೂ ಆಗಲಿ, ಅಧ್ಯಕ್ಷರಾಗಲು ಅವಕಾಶ ಮಾಡಿಕೊಟ್ಟಿದ್ದರೆ ಅಲ್ಲಿನ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುತ್ತಿದ್ದವು. ಜಿಲ್ಲಾ ಪರಿಷತ್ತಿನಲ್ಲಿ ಅನೇಕ ಸಮಸ್ಯೆಗಳು ಇವೆ. ಅದು ಕುಡಿಯುವ ನೀರಿನ ಸಮಸ್ಯೆಯಾಗಿರಬಹುದು. ಬೇರಾವುದೇ ಸಮಸ್ಯೆಯಾಗಿರಬಹುದು ಅವುಗಳೆಲ್ಲವನ್ನೂ ನಾವು ಇಲ್ಲಿ ವಿಧಾನ ಸೌಧದಲ್ಲಿ ಕುಳಿತುಕೊಂಡಿರತಕ್ಕ ಮಂತ್ರಿಗಳು ಮಾಡಿ ಎಂದು ಹೇಳಿದರೂ ಒಂದೊಂದು ಸಲ ಆಗುವುದಿಲ್ಲ. ಈಗ ಜಿಲ್ಲಾ ಪರಿಷತ್ತಿನಲ್ಲಿ ಏನಾದರೂ ಕೆಲಸ ಕಾರ್ಯಗಳು ಆಗಬೇಕಾದರೆ ಅಧ್ಯಕ್ಷರು ಹೇಳುವವರೆವಿಗೂ ಮುಖ್ಯ ಕಾರ್ಯದರ್ಶಿಗಳು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ತಾವೆಲ್ಲರೂ ಪ್ರಜಾಪ್ರಭುತ್ವತತದಲ್ಲಿ ನಂಬಿಕೆ ಇರತಕ್ಕಂಥ ಜನ. ಆ ಹೆಸರು ಹೇಳಿಕೊಂಡು ೬ ತಿಂಗಳಲ್ಲಿ ಆ ಕಡೆ ಇದ್ದವರು ಈ ಕಡೆ ಬಂದಿದ್ದೇವೆ ಈ ಕಡೆ ಇದ್ದವರು ಆ ಕಡೆ ಹೋಗಿದ್ದಾರೆ. ಆ ಕಡೆ ಕುಳಿತುಕೊಂಡಿರತಕ್ಕಂಥ ಜನ ಮೌಲ್ಯಾಧಾರಿತ ರಾಜಕಾರಣ ಮಾಡತಕ್ಕಂಥ ಜನ, ತಮಗೆ ಮೌಲ್ಯಾಧಾರಿತ ರಾಜಕಾರಣದಲ್ಲಿ ವಿಶ್ವಾಸ ಇದ್ದರೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇದ್ದರೆ ಮೆಜಾರಿಟಿ ಇಲ್ಲದೆ ಇರತಕ್ಕಂಥ ಕಡೆಗಳಲ್ಲಿ ರಾಜೀನಾಮೆಯನ್ನು ಕೊಡಿಸುವಂತಹ ಕೆಲಸ ಮಾಡಿಸಿ ಆಗ ಜಿಲ್ಲಾ ಪರಿಷತ್ತುಗಳಲ್ಲಿ ಸುಲಲಿತವಾಗಿ ಕೆಲಸ ಮಾಡುವುದಕ್ಕಾಗುತ್ತದೆ. ಆಡಳಿತ ಸಹ ಸುಲಲಿತವಾಗಿ ನಡೆಯುತ್ತದೆ. ಆ ಕೆಲಸ ತಾವು ಮಾಡಿ ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ತರಾತುರಿಯಲ್ಲಿ ಅನೇಕ ಕಡೆ. ನಾಮಿನೇಶನ್ಸ್ ಅನ್ನು ಮಂಡಲ ಪಂಚಾಯಿತಿಗಳಿಗೆ ಮಾಡಿದ್ದಾರೆ. ನಾನು ಮಾನ್ಯ ನಮ್ಮ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಎಲ್ಲಿ ಅವಶ್ಯಕತೆ ಇಲ್ಲವೋ, ಅಲ್ಲಿಯೂ ಸಹ ಜಸ್ಟ್ ಮೆಜಾರಿಟಿಗೋಸ್ಕರ ನಾಮಿನೇಶನ್ಸ್ ಮಾಡಿ ತಮ್ಮ ಪಕ್ಷದವರನ್ನು ಪ್ರಧಾನರನ್ನಾಗಿ ಮಾಡಬೇಕೆಂದು ನಾಮಿನೇಶನ್ಸ್ ಮಾಡಿದ್ದಾರೆ, ಇದು ತಮ್ಮ ಪಕ್ಷದವರೇ ಪ್ರಧಾನರನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಈ ಬಗ್ಗೆ ನಾವು ಸುಮಾರು ೯ ಸ್ಟೇ ಆರ್ಡರ್ಸ್‌ನ್ನು ಹೈಕೋರ್ಟ್‌ನಿಂದ ತೆಗೆದುಕೊಂಡು ಹೋಗಿದ್ದೇವೆ. ಈಗ ನಮ್ಮ ಸರ್ಕಾರ ಬಂದಿದೆ ಇದನ್ನು ಜಸ್ಟಿಫೈ ಮಾಡಲಿ ಎನ್ನುವ ಉದ್ದೇಶದಿಂದ ಈ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಯಿತು,

ಶ್ರೀ ಬಸವರಾಜರಾಯರೆಡ್ಡಿ.—ನೀವು ಇನ್ನು ವಿರೋಧಪಕ್ಷದಲ್ಲಿ ಇದ್ದೀರಿ ಎಂದು ತಿಳಿದು ಮಾತನಾಡುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಇಲ್ಲ. ನೀವು ಇನ್ನು ಸರ್ಕಾರ ನಡೆಸುತ್ತಿದ್ದೀರಿ ಎಂದು ತಿಳಿದುಕೊಂಡಿದ್ದೀರಿ. ಆದಕ್ಕಾಗಿ ನಾನು ಹೇಳುವುದೇನೆಂದರೆ ಅನವಶ್ಯಕವಾಗಿ ಎಲ್ಲಿ ನಾಮಿನೇಶನ್ಸ್ ಆಗಿದೆಯೋ ಅದನ್ನು ವಿತ್‌ಡ್ರಾ ಮಾಡಿ ಎಂದು ಒಂದು ಹೊಸ ಆದೇಶ ಕೊಡಬೇಕು. ಅಲ್ಲಿ ಹೊಸದಾಗಿ ಅಧ್ಯಕ್ಷರು ಮತ್ತು ಪ್ರಧಾನರನ್ನು ಚುನಾಯಿಸಲು ಅನುವು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇಲ್ಲ ನಾವು ಡಿಸ್‌ಮಿಸ್ ಮಾಡುವವರೆವಿಗೂ ಅಧಿಕಾರದಲ್ಲಿ ಇರುತ್ತೇವೆ. ಆಮೇಲೆ ಕಾನೂನು ಪ್ರಕಾರ ನೋಡೋಣ ಎಂದು ಇದ್ದರೆ ಅದು ಕಷ್ಟವಾಗುತ್ತದೆ. ಅದಕ್ಕೆ ವಿರೋಧಪಕ್ಷದ ನಾಯಕರು ತಮ್ಮ ಪಕ್ಷದ ವತಿಯಿಂದ ಒಂದು ಆದೇಶ ಹೊರಡಿಸಿ ರಾಜೀನಾಮೆ ನೀಡುವಂತೆ ತಿಳಿಸಿ, ಅವರೇ ತಮ್ಮ ನೈತಿಕ ಹೊಣೆ ಹೊತ್ತುಕೊಂಡು ರಾಜೀನಾಮೆ ಕೊಟ್ಟರೆ ಸುಲಲಿತವಾಗಿ ಜನರ ಸಮಸ್ಯೆಗಳು ಪರಿಹಾರವಾಗುತ್ತವೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಂಡರೆ ಅನೇಕ ಜಿಲ್ಲೆಗಳಲ್ಲಿ ಗೊಂದಲವಾಗುತ್ತದೆ.

ಸಾಮಾನ್ಯ ಜನರಿಗೆ ಸವಲತ್ತುಗಳು ಏನು ತಲುಪಬೇಕಾಗಿತ್ತೋ ಅವುಗಳು ತಲುಪುತ್ತಿಲ್ಲವೆಂದು ನಾನು ಅಧ್ಯಕ್ಷರ ಮುಖಾಂತರ ಹೇಳಬಯಸುತ್ತೇನೆ. ಹಿಂದಿನ ಸರ್ಕಾರದವರು ಪಕ್ಷವನ್ನು ಇಬ್ಭಾಗ ಮಾಡಿಕೊಂಡು ರೈತನ ಮಕ್ಕಳು ಯಾರು ಎಂದು ತೋರಿಸಬೇಕೆಂದು ಹೋರಾಡಿದರು. ಈ ಜಗಳದಿಂದ ಸ್ವಲ್ಪ ಸಂಖ್ಯೆಯಲ್ಲಿ ಮಾತ್ರ ಅವರು ಆರಿಸಿ ಬರುವುದಕ್ಕೆ ಸಾಧ್ಯವಾಯಿತೆಂದು ನಾನು ಭಾವಿಸುತ್ತೇನೆ. ಇರಿಗೇಷನ್‌ಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆಂದು ಹೇಳಿಕೊಂಡು ಅವರು ಅಧಿಕಾರಕ್ಕೆ ಬಂದಿದ್ದರು ನಾನು ಮಣ್ಣಿನ ಮಗನಿದ್ದೇನೆ, ಎಂದು ಮಾನ್ಯ ದೇವೇಗೌಡರು ಹೇಳಿಕೊಂಡು ಈ ಬಜೆಟ್ ಅಧಿವೇಶನ ದಲ್ಲೂ ನೀರಾವರಿಗಾಗಿ ವರ್ಷಕ್ಕೆ ೩೦೦ ಕೋಟಿ ರೂಪಾಯಿಗಳನ್ನು ಕೊಡದೇ ಹೋದರೆ ನಾನು ಒಂದು ಕ್ಷಣ ಕೂಡ ಸದನದಲ್ಲಿ ಇರುವುದಿಲ್ಲವೆಂದು ಟೇಬಲ್ ಗುದ್ದೀ ಗುದ್ದೀ ಪಾಪ ಮನೆಗೇ ಹೋಗಿಬಿಟ್ಟರು. ಅಷ್ಟೇ ಸ್ಪಷ್ಟವಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದ್ದರು. ನಾನೂ ಕೂಡ ಮಣ್ಣಿನ ಮಗ ಎಂದು ಅವರೂ ಕೂಡ ಹೇಳುತ್ತಿದ್ದರು. ಅವರೂ ಕೂಡ ಪಟೇಲರೇ ಆಗಿದ್ದವರು. ಆದರೆ ಅವರ ಬಜೆಟ್ ತೆಗೆದು ನೋಡಿದರೆ ರಾಮಕೃಷ್ಣ ಹೆಗಡೆಯವರು ಹೇಳಿದ ವಿಷಯ ಮಾಡಿರುತ್ತಿರಲಿಲ್ಲ ೩೦೦ ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಅವರೂ ಕೂಡ ಏನೂ ಮಾಡಲಿಲ್ಲ, ೩೦೦ ಕೋಟಿ ರೂಪಾಯಿಗಳನ್ನು ಇಡದಿದ್ದಾಗ ನಾನು ರಾಜೀನಾಮೆ ಕೊಡುತ್ತೇವೆಂದು ಹೇಳಿಕೊಂಡು ಮಾನ್ಯ ದೇವೇಗೌಡರು ಕೊನೆಯವರೆಗೂ ಮಂತ್ರಿಮಂಡಲದಲ್ಲಿದ್ದರು.

ಶ್ರೀ ಸಿ. ಬೈರೇಗೌಡ.—ನೀರಾವರಿ ಯೋಜನೆಗಳಿಗಾಗಿ ೩೦೦ ಕೋಟಿ ರೂಪಾಯಿ ಕೊಡದೇ ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದ ರೀತಿಯಲ್ಲೇ ಮಾನ್ಯ ದೇವೇಗೌಡರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದರು.

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳಿದ ಸ್ಟೇಟ್‌ಮೆಂಟ್‌ನ್ನು ಕರೆಕ್ಟ್ ಮಾಡಿಕೊಂಡು ಹೇಳುತ್ತೇನೆ. ರಾಜಿನಾಮೆ ಕೊಟ್ಟರು ನಿಜ. ಆದರೆ. ಪುನಃ ಬೊಮ್ಮಾಯಿಯವರು ಮಂತ್ರಿಮಂಡಲ ರಚನೆ ಮಾಡಿದ ಮೇಲೆ ಮಾನ್ಯ ದೇವೇಗೌಡರು ಇರಿಗೇಷನ್ ಮತ್ತು ಪಿ. ಡಬ್ಲ್ಯೂ. ಡಿ. ಇಲಾಖೆಯನ್ನೇ ವಹಿಸಿಕೊಂಡು ಮಂತ್ರಿಯಾದರೂ, ಆಗಲೂ ೩೦೦ ಕೋಟಿ ರೂಪಾಯಿಗಳನ್ನು ಇಟ್ಟಿರಲಿಲ್ಲ. ೩೦೦ ಕೋಟಿ ರೂಪಾಯಿ ಕೊಟ್ಟಿಲ್ಲದಿದ್ದುದರಿಂದ ಬೇರೆ ಪೋರ್ಟ್‌ಫೋಲಿಯೋ ಆದರೂ ತೆಗೆದುಕೊಂಡು ಮಂತ್ರಿಗಳಾಗಬಹುದಿತ್ತು. ಒಟ್ಟಿನಲ್ಲಿ ನಿಮ್ಮ ಪಕ್ಷದ ಜಗಳದಲ್ಲಿ ನಮ್ಮ ರಾಜ್ಯ ಬಡವಾಯಿತು.

ಶ್ರೀ ಸಿ. ಬೈರೇಗೌಡಃ—ತಾವು ಈಗ ದೊಡ್ಡ ಸಂಖ್ಯೆಯಲ್ಲಿ ಆರಿಸಿ ಬಂದಿದ್ದೀರಿ. ನೀವು ಯಾವ ರೀತಿ ಮಾಡುತ್ತೀರಿ ಎಂದು ನೋಡುತ್ತೇವೆ. ಒಂದು ಮಾತು ನಮ್ಮ ಜಗಳದಲ್ಲಿ ಕೂಸು ಬಡವಾಗಿರು ವುದು ನಿಜ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ ನಮ್ಮ ಮುಂದಿರತಕ್ಕ ವಿಷಯ ಏನೆಂದರೆ, ಮಾನ್ಯ ಬಿ.ಜೆ.ಪಿ. ಪಕ್ಷದ ನಾಯಕರು ಮತ್ತು ಅವರ ಸ್ನೇಹಿತರುಗಳು ಮುಷ್ಕರ ನಡೆಸುತ್ತಿರುವ ಬಗೆದೆ ನಿಮ್ಮ ಕಛೇರಿಯಲ್ಲಿ ಮಾತುಕತೆ ಆಡಿದ ರೀತಿಯಲ್ಲಿ ಆ ವಿಷಯವನ್ನು ಅಂತ್ಯಗೊಳಿಸಿ ಮುಂದಿನ ಕಲಾಪಕ್ಕೆ ಹೋಗಬೇಕೆಂದು ತಿಳಿಸುತ್ತೇನೆ. ಮಾನ್ಯ ಸದಸ್ಯರುಗಳನ್ನು ಅವರ ಸ್ಥಾನಗಳಿಗೆ ಹೋಗು ವುದಕ್ಕೆ ಮಾನ್ಯ ಅಧ್ಯಕ್ಷರು ತಿಳಿಸಬೇಕು. ಮಾನ್ಯ ಯಡಿಯೂರಪ್ಪನವರು ಮತ್ತು ಇತರ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಬೆಳಿಗ್ಗೆಯಿಂದ ಬಾವಿಯಲ್ಲಿ ಧರಣಿಕುಳಿತುಕೊಂಡಿದ್ದಾರೆ. ಈ ವಿಚಾರವನ್ನು ತಾವುಗಳು ಬಗೆಹರಿಸಿದ ವಿಚಾರವನ್ನು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ಸಮಸ್ಯೆ ಯನ್ನು ಬಗೆಹರಿಸುವುದಕ್ಕೆ ಸಹಕರಿಸಿದ ಸನ್ಮಾನ್ಯ ಅಧ್ಯಕ್ಷರನ್ನು ಮತ್ತು ಸಭಾನಾಯಕರನ್ನು ಅಭಿನಂದಿಸುತ್ತಾ ಅವರುಗಳಿಗೆ ನಾನು ವಂದನೆಗಳನ್ನು ಅರ್ಪಿಸುತ್ತಿದ್ದೇನೆ ಈ ಒಂದು ಸಮಸ್ಯೆಗೆ ಪರಿಹಾರ ದೊರೆತ ಕಾರಣದಿಂದಾಗಿ ಮಾನ್ಯ ಯಡಿಯೂರಪ್ಪನವರು ಮತ್ತು ಇತರ ಮಾನ್ಯ ಸದಸ್ಯರು ಗಳು ತಮ್ಮ ತಮ್ಮ ಸ್ಥಾನಗಳಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರೊಂದಿಗೆ ಚರ್ಚಿಸಿ ಈಗಾಗಲೇ ತೀರ್ಮಾನ ಮಾಡಿದಹಾಗೆ ೨೧ನೇ ತಾರೀಖು ನಾಲ್ಕು ಗಂಟೆಗೆ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಎತ್ತಿರತಕ್ಕಂಥ ಪ್ರಾಮುಖ್ಯವಾದ ವಿಚಾರದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಲಾಗಿದ್ದು, ಅದಕ್ಕೆ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಯವರು ೨೨ನೇ ತಾರೀಖು ಬೆಳಿಗ್ಗೆ ಉತ್ತರವನ್ನು ಕೊಡುವವರಿದ್ದಾರೆ. ಈ ಒಂದು ಸಮಸ್ಯೆಯನ್ನು ಇತ್ಯರ್ಥಪಡಿಸುವಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮತ್ತಿತರ ವಿರೋಧಪಕ್ಷ ನಾಯಕರುಗಳು ನನಗೆ ಸಹಕರಿಸಿದ್ದಾರೆ, ಅದಕ್ಕಾಗಿ ಅವರುಗಳಿಗೆ ನನ್ನ ಅಭಿನಂದನೆಗಳು. ಈಗ

ಧರಣಿ ಕುಳಿತಿರುವ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗುತ್ತಾರೆ ಎಂದು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಉತ್ತರವನ್ನು ಕೊಡುತ್ತಾರೆಯೋ? ಎಂದು ಹೇಳ ಬೇಕು.

ಅಧ್ಯಕ್ಷರು.—೨೧ನೇ ತಾರೀಖು ನಡೆಯುವ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುತ್ತಾರೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರು ಧರಣಿ ಕುಳಿತುಕೊಂಡ ಮತ್ತಿತರ ಮಾನ್ಯ ಸದಸ್ಯರುಗಳವರೊಂದಿಗೆ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರು, ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಸಿ. ಬೈರೇಗೌಡರು ಮತ್ತು ಇತರರು ಸೇರಿ, ಬೆಳಿಗ್ಗೆಯಿಂದ ಇಲ್ಲಿ ನಡೆದಂತಹ ವಿದ್ಯಮಾನದ ಬಗ್ಗೆ ಒಂದು ಪರಿಹಾರವನ್ನು ಕಂಡು ಹಿಡಿದಿದ್ದಾರೆ. ಮಾನ್ಯ ಸಭಾನಾಯಕರು ೨೧ನೇ ತಾರೀಖಿನ ದಿವಸ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ, ತಾವುಗಳು ಸಭಾ ನಾಯಕರ ಮನ ಒಲಿಸಿ ಈ ಒಂದು ಪ್ರಾಮುಖ್ಯವಾದ ವಿಷಯದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

ಆ ಮೂಲಕ ರಾಜ್ಯದ ರೈತರಿಗೆ ಕೂಡ ಅನುಕೂಲ ಮಾಡಿಕೊಟ್ಟ ಹಾಗೆ ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ೨೧ನೇ ತಾರೀಖು ಬೆಳಿಗ್ಗೆ ಪ್ರತ್ಯೇಕವಾದ ಉತ್ತರವನ್ನು ಈ ಬಗ್ಗೆ ಕೊಡುವುದಾಗಿ ಹೇಳಿ ಔದಾರ್ಯವನ್ನು ತೋರಿಸಿದ್ದಾರೆ. ನಮ್ಮ ಉದ್ದೇಶ ರೈತರ ಕಲ್ಯಾಣದ ಬಗ್ಗೆ ಆಗಿದೆ. ನಾವು ಕೇವಲ ಕಾಲಹರಣ ಮಾಡಬೇಕೆಂದು ಇಲ್ಲಿ ಧರಣಿ ಕುಳಿತಿಲ್ಲ. ನಾವುಗಳು ೨೧ನೇ ತಾರೀಖು ರೈತರ ಪರವಾಗಿ ಇಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ೨೧ನೇ ತಾರೀಖು ರಾಜ್ಯದ ರೈತರು ಸಮಾಧಾನ ನಿಟ್ಟುಸಿರು ಬಿಡುವಂತಹ ರೀತಿಯಲ್ಲಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ ಎಂದು ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ಈ ಒಂದು ತೀರ್ಮಾನಕ್ಕೆ ಮಾನ್ಯರು ಬರುವಲ್ಲಿ ಸಹಕರಿಸಿದ ತಮಗೆಲ್ಲರಿಗೂ ನಾನು ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಮಾತನಾಡುತ್ತಿರುವ ಹಂತದಲ್ಲಿ ಮಾನ್ಯ ಬೈರೇಗೌಡರು ಅವರ ಅಭಿಪ್ರಾಯವನ್ನು ಕೊಟ್ಟರು. ನಾನು ಒಂದು ಮಾತನ್ನು ಹೇಳ ಬಯಸುವುದೇನೆಂದರೆ ನಿಮ್ಮ ನಿಮ್ಮ ಜಗಳದಲ್ಲಿ ಕೂಸು ಬಡವಾಯಿತು. ನಿಮ್ಮ ಒಳಜಗಳದಿಂದಾಗಿ ಅನೇಕ ನೀರಾವರಿ ಯೋಜನಗಳು ನಿಂತು ಹೋಯಿತು. ಮಾನ್ಯರು ಕೇಳಿದ ನೀರಾವರಿ ಬಾಬಿಗಾಗಿ ೩೦೦ ಕೋಟಿ ರೂಪಾಯಿಗಳ ಬದಲಾಗಿ ಮುಖ್ಯಮಂತ್ರಿಯವರು ೧೫೦ ಕೋಟಿ ರೂಪಾಯನ್ನೂ ಕೂಡ ಕೊಡಲಿಲ್ಲ. ಆಗ ನೀರಾವರಿ ಮಂತ್ರಿಗಳು ತತ್‌ಕ್ಷಣ ಪದವಿಯನ್ನು ಬಿಡಬೇಕಾಗಿತ್ತು. ಹೀಗ ಭಿನ್ನಾಭಿಪ್ರಾಯ ಬಂದ ಮೇಲೂ ಕೂಡ ಅಲ್ಲಿ ಉಳಿದುಕೊಳ್ಳ ಬಾರದಿತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು ಕೂಡ ನಾನು ರೈತ ಕುಟುಂಬದಿಂದ ಬಂದವನು ನಾನು ನೀರಾವರಿಗೆ ಆಧ್ಯತೆಯನ್ನು ಕೊಡುತ್ತೇನೆ. ೩೦೦ ಕೋಟಿ ಅಲ್ಲದಿದ್ದರೂ ೨೦೦ ಕೋಟಿಗಳನ್ನಾದರೂ ಒದಗಿಸುತ್ತೇನೆ ಎಂದು ಹೇಳಿದರು. ಆದರೆ ಹಾಗೆ ಹೇಳಿದವರು ಆ ಕೆಲಸವನ್ನು ಮಾಡಲಿಲ್ಲ. ಹೀಗಾಗಿ ಕಾವೇರಿ ಮತ್ತು ಕೃಷ್ಣಬೇಸಿನ್ ಪ್ರಾಜೆಕ್ಟ್‌ಗಳು ಅಲ್ಲೇ ಮಂದಗತಿಯಿಂದ ನಡೆಯುತ್ತಾ ಇವೆ. ಈಗ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದಲ್ಲದೆ ಎಲ್ಲಾ ಆನ್‌ಗೋಯಿಂಗ್ ಪ್ರಾಜೆಕ್ಟುಗಳಿಗೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಈ ಅಪರ್‌ಕೃಷ್ಣ ಪ್ರಾಜೆಕ್ಟ್‌ಗೆ ಹಿಂದೆ ಎಷ್ಟು ಆದ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟನ್ನು ಕೊಡಲಿಲ್ಲ. ೭೫ ಕೋಟಿ ರೂಪಾಯಿಯನ್ನು ಪ್ರಾವಿಜನ್ ಮಾಡಿ ಕೇವಲ ೨೫ ಕೋಟಿ ರೂಪಾಯಿಯನ್ನು ಮಾತ್ರ ಖರ್ಚು ಮಾಡಿದಾ ರೆ. ಈ ೨೫ ಕೋಟಿಯಲ್ಲಿ ಸುಮಾರು ೧೭–೧೮ ಕೋಟಿ ರೂಪಾಯಿಗಳು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ಗಳಿಗೆ ಹೋಗಿದೆ. ಹೀಗಾಗಿ ಇರಿಗೇಷನ್ ಪೊಟೆನ್ಷಿಯಾಲಿಟಿ ಏನು ಕ್ರಿಯೇಟ್ ಮಾಡಬೇಕಾಗಿತ್ತೋ ಅದನ್ನು ಮಾಡಲು ಆಗಲಿಲ್ಲ. ಇದರಿಂದ ಸಾವಿರಾರು ರೈತರು ಈ ಒಂದು ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳಲು ಆಗಲಿಲ್ಲ. ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗಿ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ತೆಲಗುಗಂಗಾ ಪ್ರಾಜೆಕ್ಟ್ ಒಂದು ಏನಿದೆ ಆ ಪ್ರಾಜೆಕ್ಟ್ ಒಂದು ವೇಳೆ ಆಂಧ್ರದವರು ಬೇಗನೆ ಕಂಪ್ಲೀಟ್ ಮಾಡಿದರೆ ಕೃಷ್ಣ ಬೇಸಿನ್‌ನಲ್ಲಿ

ಇರತಕ್ಕ ಪ್ರಾಜೆಕ್ಟ್‌ಗಳಿಗೆ ಹೊಡೆತ ಬೀಳುತ್ತದೆ. ಈ ಕೃಷ್ಣ ಬೆಸಿನ್ ಪ್ರಾಜೆಕ್ಟ್‌ಗಳು ಬರಗಾಲ ಪೀಡಿತ ಪ್ರದೇಶಗಳಾದ ಗುಲ್ಬರ್ಗ ಬೀಜಾಪುರ, ಬೆಳಗಾಂ, ಧಾರವಾಡ, ಈ ಭಾಗಗಳಲ್ಲಿ ಇದೆ. ಒಂದು ವೇಳೆ ಈ ತೆಲಗುಗಂಗಾ ಪ್ರಾಜೆಕ್ಟ್‌ಗೆ ಹೆಚ್ಚಿನ ಆದ್ಯತೆ ನೀಡಿ ಆಂಧ್ರದವರು ಹೆಚ್ಚಿನ ಹಣವನ್ನು ಖರ್ಚು ಮಾಡಿದರೆ ನಾಳೆ ನಮಗೆ ತೊಂದರೆ ಉಂಟಾಗುತ್ತದೆ. ಕಾವೇರಿ ಬೆಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಮಾಡಿರುವುದರಿಂದ ಯಾವ ರೀತಿ ಕಷ್ಟಗಳು ಬಂದವು ಅದೇ ರೀತಿಯಲ್ಲಿ ಇಲ್ಲೂ ಬರುತ್ತವೆ. ಈಗ ಪದೇಪದೇ ತಮಿಳುನಾಡಿನವರು ರಿಕ್ವೆಸ್ಟ್ ಮಾಡಿದ ತಕ್ಷಣ ನೀರು ಬಿಟ್ಟು ಕೊಡಬೇಕಾಗಿದೆ. ಅವರು ಮೆಟ್ಟೂರು ಡ್ಯಾಮ್ ಕಟ್ಟಿಸಿದ ಮೇಲೆ ಅವರ ಸ್ಟಾಕ್ ಮುಗಿದ ಕೂಡಲೇ ಪುನಃ ನೀರನ್ನು ಬೇಡಿ ಎಂದು ಇಲ್ಲಿಗೆ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ. ನಮ್ಮ ಸ್ಟಾಂಡಿಂಗ್ ಕ್ರಾಫ್ಟ್‌ಗೆ ನಮ್ಮ ರೈತನನ್ನು ಉಳಿಸಿ ಎಂದು ಅವರು ನಮಗೆ ಕೇಳಿಕೊಳ್ಳುತ್ತಾರೆ. ನಮ್ಮಿಂದ ನೀರನ್ನು ಪುನಃ ಪಡೆದುಕೊಳ್ಳುತ್ತಾರೆ. ಇದು ನಡೆದುಕೊಂಡು ಬರುತ್ತಿದೆ. ಅದೇ ರೀತಿ ನಾಳೆ ಒಂದು ಹಕ್ಕನ್ನು ಕ್ರಿಯೇಟ್ ಮಾಡಿಕೊಳ್ಳಬೇಕೆಂದು ಆಂಧ್ರದವರು ಪ್ರಯತ್ನ ಮಾಡುತ್ತಾರೆ. ಆದ್ದರಿಂದ ತೆಲಗುಗಂಗಾ ಪ್ರಾಜೆಕ್ಟ್ ಕಂಪ್ಲೀಟ್ ಆಗುವುದಕ್ಕೆ ಮುಂಚೆ ಹೆಚ್ಚಿನ ಹಣವನ್ನು ಕೊಟ್ಟು ಈ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗಲಿ ಅಥವಾ ಆ ಒಂದು ಕೃಷ್ಣ ಬೆಸಿನ್‌ನಲ್ಲಿ ಬರತಕ್ಕ ಪ್ರಾಜೆಕ್ಟ್‌ಅನ್ನು ಷೆಡ್ಯೂಲ್ ಟೈಮ್‌ನಲ್ಲಿ ಮುಗಿಸತಕ್ಕ ಕೆಲಸ ಮಾಡಬೇಕು. ಇದಕ್ಕಾಗಿ ಹಿಂದೆ ಬೇರೆ ರೀತಿಯಿಂದ ಹಣ ಕೊಡುತ್ತೇವೆಂದು ಹಿಂದಿನ ಸರ್ಕಾರದವರು ಹೇಳುತ್ತಿದ್ದರು. ಇರಿಗೇಷನ್ ಬಾಂಡನ್ನು ಇಟರ್‌ಡ್ಯೂಸ್ ಮಾಡುತ್ತೇವೆ, ಅಥವಾ ಹೊರಗಿನಿಂದ ಸಾಲ ತರುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಆದರೆ ಅದು ಯಾವುದೂ ಆಗಲಿಲ್ಲ. ಇದಕ್ಕಾಗಿ ಯಾವರೀತಿ ಸಹಾಯ ಮಾಡುತ್ತೀರಿ, ಎನ್ನತಕ್ಕದ್ದು ಕೂಡ ಬಹಳ ಮಹತ್ವವಾದ ವಿಷಯವಾಗಿದೆ. ಅಲ್ಲಿನ ಬರಗಾಲವನ್ನು ಹೊಡೆದೋಡಿಸಬೇಕಾದರೆ ಈ ಒಂದು ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಬೇಕು. ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಎನ್ನತಕ್ಕ ಮಾತನ್ನು ಇವತ್ತಿನ ದಿವಸ ಸರ್ಕಾರದವರು ಈಗಾಗಲೇ ಒಪ್ಪಿಕೊಂಡಿದ್ದಾರೆ.

ಕೊನೆಯದಾಗಿ ಅನೇಕ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳ ಅವಧಿ ಮುಗಿದಿದೆ. ಅವುಗಳಿಗೆ ಚುನಾವಣೆ ಮಾಡುವುದರ ಬಗ್ಗೆ ಈಗಾಗಲೇ ನಾವು ಘೋಷಣೆಯನ್ನು ಮಾಡಿದ್ದೇವೆ. ಆದಷ್ಟು ಬೇಗ ಚುನಾವಣೆಗಳನ್ನು ಮಾಡುತ್ತೇವೆನ್ನತಕ್ಕ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇವರು ಹಿಂದೆ ನಮಗೆ ಪ್ರಜಾಪ್ರಭುತ ದ ಮೇಲೆ ವಿಶ್ವಾಸವಿದೆ ಎಂದು ಹೇಳಿ ಏನು ಮಾಡಿದರೆಂಬುದನ್ನು ಹೇಳುತ್ತೇವೆ. ಬೊಮ್ಮಾಯಿಯವರು ಅಧಿಕಾರವನ್ನು ವಹಿಸಿಕೊಂಡ ಮೇಲೆ ೧೩೦ ಮುನಿಸಿಪಾಲಿಟಿಗಳಿಗೆ ಒಂದೇ ದಿವಸ ಆಡಳಿತಾಧಿಕಾರಿಗಳನ್ನು ಹಾಕಿದರು. ಚುನಾವಣೆಗಳನ್ನು ಮಾಡಲಿಲ್ಲ. ಇವೊತ್ತು ನಮ್ಮ ಸರ್ಕಾರ ಚುನಾವಣೆಗಳನ್ನು ಮಾಡಲು ಸಿದ್ಧವಿದೆ. ಇದು ಸ್ವಾಗತಾರ್ಹವಾದುದು. ಈಗ ಸರ್ಕಾರ ಹೊಸದಾಗಿ ರಚನೆಯಾಗಿದೆ. ಮತ್ತು ನಮಗೆ ಜನರು ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ನಾವು ಏನು ವಾಗ್ದಾನ ಮಾಡಿದ್ದೇವೆ, ಆದನ್ನು ಪೂರೈಸತಕ್ಕ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಈಗಾಗಲೇ ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಇನ್ನು ಹೆಚ್ಚು ವಿಷಯವನ್ನು ಪ್ರಸ್ತಾಪ ಮಾಡದೇ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯವನ್ನು ಸಂತೋಷದಿಂದ ಮಂಡಿಸುತ್ತಿದ್ದೇನೆ. ಅವರ ಭಾಷಣವನ್ನು ನಾನು ಅಭಿನಂದಿಸುತ್ತೇನೆ. ಆದೇರೀತಿ ವಿರೋಧಪಕ್ಷದವರು ಕೂಡ ಈ ನಿರ್ಣಯಕ್ಕೆ ಬೆಂಬಲ ಕೊಡುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತಾ, ನನಗೆ ನಾಲು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ಅಧ್ಯಕ್ಷರೇ, ಈ ದಿವಸ ರಾಜ್ಯಪಾಲರು ಮಾಡಿರುವ ಭಾಷಣಕ್ಕೆ ನನ್ನ ಅನುಮೋದನೆಯನ್ನೂ ಮತ್ತು ಶ್ರೀ ಖರ್ಗೆಯವರು ಹೇಳಿರುವ ಎಲ್ಲಾ ಅಂಶಗಳನ್ನೂ ನಾನು ಅನುಮೋದಿಸುತ್ತಾ ಕೆಲವೇ ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸಲು ತೀರ್ಮಾನ ಮಾಡಿದ್ದೇನೆ. ನಮ್ಮ ರಾಜ್ಯ ಅನುಭವಿ, ಒಳ್ಳೆಯ ಹೆಸರನ್ನು ಪಡೆದಂಥ ಮುಖ್ಯಮಂತ್ರಿಗಳನ್ನು ಪಡೆದು ಅವರು ಅಧಿಕಾರ ವಹಿಸಿಕೊಂಡ ಕೆಲವೇ ದಿವಸಗಳಲ್ಲಿ ಈ ಸಭೆಯನ್ನು ಕರೆದಿದ್ದಾರೆ ಮತ್ತು ಸರ್ಕಾರದ ಧೋರಣೆಯನ್ನು ರಾಜ್ಯಪಾಲರ ಮೂಲಕ ಹೇಳಿಸಿದ್ದಾರೆ. ನಾನು ಎಲ್ಲಾ ವಿಷಯಕ್ಕೂ ಹೋಗುವುದಿಲ್ಲ. ಬಹುತೇಕ ನಮ್ಮ ಜನಕ್ಕೆ ಅನುಕೂಲವಾಗುವ ವಿಷಯಗಳ ಬಗ್ಗೆ ಮಾತ್ರ ಮಾತನಾಡಲು ಇಷ್ಟಪಡುತ್ತೇನೆ. ಇದರಲ್ಲಿ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಮಾನ್ಯ ಖರ್ಗೆಯವರು ಬಹಳ ವಿಶದವಾಗಿ ಹೇಳಿದ್ದಾರೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ೨೦ ಅಂಶಗಳ ಕಾರ್ಯಕ್ರಮ ಎಂದರೆ ಇಂದಿರಾಗಾಂಧಿಯವರ ಹೆಸರನ್ನು ಎಲ್ಲಿ ನೆನಪು ಮಾಡಿಕೊಡುತ್ತದೆಯೋ ಎಂದು, ಅದಕ್ಕೆ ಕೆ.ಡಿ. ಪ್ರೋಗ್ರಾಮ್ ಎಂದು ಇಟ್ಟರು. ಬಡಜನರಿಗೆ ಎಲ್ಲೂ ಕೂಡ

ಸ್ಪೈಟ್ ಕೊಡುವುದಕ್ಕೆ ಆಗಲಿಲ್ಲ. ಸಿಂಧ್ಯಾ ಅವರೇನೋ ಬಹಳ ಚೆನ್ನಾಗಿ ಮಾಡಿದಿವಿ ಎಂದು ಹೇಳಿದರು ಆದರೆ ಒಟ್ಟಿನ ಪರ್‌ಫಾರ್ಮೆನ್ಸ್ ಜನತಾ ಸರ್ಕಾರ ಇದ್ದಾಗ ೨೦ ಅಂಶದ ಕಾರ್ಯಕ್ರಮ ಪೂರ್ಣವಾಗಿ ನಿಂತುಹೋಗಿತ್ತೆಂದು ಹೇಳುತ್ತಾ, ಅದನ್ನು ಸರಿಪಡಿಸುವುದಕ್ಕೆ ಈ ಸರ್ಕಾರ ಬದ್ಧವಾಗಿದೆ ಎಂದು ಗವರ್ನರ್‌ರವರ ಮೂಲಕ ಹೇಳಿಸಿದ್ದೇವೆ.

ಇನ್ನು ಅಧಿಕಾರ ವಿಕೇಂದ್ರೀಕರಣ. ಜನತಾ ಸರ್ಕಾರ ಬಂದಮೇಲೆ ವಿಕೇಂದ್ರೀಕರಣದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಪ್ರಚಾರ ಮಾಡಿದರು. ಆಗ ನಾವು ಆ ಕಡೆ ಕುಳಿತು ಹೇಳಿದೆವು, ಹಳೇಯ ಮೈಸೂರು ಭಾಗಕ್ಕೆ ವಿಕೇಂದ್ರೀಕರಣ ಎನ್ನುವುದು ಹೊಸದೇನೂ ಇಲ್ಲ. ಮೊದಲಿನಿಂದಲೇ ಇಲ್ಲಿ ತಾಲ್ಲೂಕು ಬೋರ್ಡ್‌ಗಳ ಡಿಸ್ಟ್ರಿಕ್ಟ್ ಬೋರ್ಡ್‌ಗಳ ನಡೆಯುತ್ತಿದ್ದುವು. ಆದ್ದರಿಂದ ಇದರ ಹೆಸರು ಹೇಳಿ ಕೊಂಡು ಓಟ್ ತೆಗೆದುಕೊಳ್ಳುತ್ತೇವೆಂದರೆ ಆಗುವುದಿಲ್ಲ ಎಂದು ಹೇಳಿ ಅವುಗಳಿಗೆ ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಕೊಡಿ ಎಂದು ಹೇಳಿದೆವು ಇವರು ಏನು ಮಾಡಿದರು ಎಂದರೆ ಪಕ್ಷದ ಆಧಾರದ ಮೇಲೆ ನಿಲ್ಲಬೇಕೆಂದು, ಹಳ್ಳಿಹಳ್ಳಿಗಳಲ್ಲಿ ವ್ಯಾಜ್ಯ ಪ್ರಾರಂಭ ಮಾಡಿದರು. ಅಧಿಕಾರದಲ್ಲಿದ್ದಾಗ, ಆ ಕ್ಷೇತ್ರಗಳ ವಿಂಗಡಣೆ ವಿಷಯದಲ್ಲಿ ೪೦೦ ಮತದಾರರಿಗಿಂತ ಕಡಿಮೆ ಅಥವಾ ಹೆಚ್ಚು ಪ್ರತಿನಿಧಿ ಇರಬಾರ ದೆಂದು ಹೇಳಿದರು. ಆದರೆ ಇವರು ಮಾಡಿದ್ದು, ಒಂದರಲ್ಲಿ ೮೦೦ ಜನಕ್ಕೆ ಒಬ್ಬನೇ ಪ್ರತಿನಿಧಿ ಒಂದು ಕಡೆ, ಪಕ್ಷದ ಕ್ಷೇತ್ರದಲ್ಲಿ ೮೦೦ ಜನಕ್ಕೆ ಮೂರು ಜನ, ಇನ್ನೊಂದು ಕಡೆ ೭೬ ಜನಕ್ಕೆ ಒಬ್ಬ ಅಭ್ಯರ್ಥಿ, ಹೀಗೆಲ್ಲಾ ಮಾಡಿ ಇವರ ಬಲವರ್ಧನೆಗೆ ಏನು ಮಾಡಬೇಕೋ ಅದೆಲ್ಲ ಮಾಡಿಕೊಂಡರು. ಅಧಿಕಾರ ಕೊಟ್ಟರು, ಜಗಳವಾಡಲೂ ಬಿಟ್ಟರು. ಹಣಕಾಸು ಏನೂ ಕೊಡಲೇ ಇಲ್ಲ. ಯಾರು ಯಾರು ಮಂಡಲ ಪಂಚಾಯಿತಿಯಲ್ಲಿ ನಿಂತು ಗೆದ್ದಿದ್ದರೋ ಅವರು ತಲೆಗೆ ಬಟ್ಟೆ ಹಾಕಿಕೊಂಡು ತಿರುಗುವಂತಹ ಪರಿಸ್ಥಿತಿ ಬಂದಿದೆ. ನಿಮಗೆ ಅನುಕೂಲವಾಗಲಿ ಎಂದು ರೋಜ್‌ಗಾರ್ ಯೋಜನೆ ಮೂಲಕ ರಾಜೀವ್ ಗಾಂಧಿಯವರು ಹಣ ಕೊಟ್ಟ ಮೇಲೆ ಪ್ರಧಾನರು, ಉಪಪ್ರಧಾನರು ಬೀದಿಯಲ್ಲಿ ಓಡಾಡಲಿಕ್ಕೆ ಪ್ರಾರಂಭ ಮಾಡಿದರು. ಆಮೇಲೆ ಏನು ಮಾಡಿದರು ಎಂದರೆ ಅಧಿಕಾರ ಕೊಟ್ಟ ಮೇಲೆ ಕೆಲವು ಕ್ಷೇತ್ರಗಳಲ್ಲಿ ಸಮಬಲ ಬಂತು. ಆಗ ನಾಮಿನೇಷನ್ ಮಾಡಿ ಮಂಡಲ ಪಂಚಾಯಿತಿ ಪ್ರಧಾನರನ್ನಾಗಿ ಮಾಡಿ ಸ್ಥಾನ ಉಳಿಸಿಕೊಂಡರು.

ಈ ರೀತಿಯ ಅವ್ಯವಹಾರಗಳನ್ನು ಮಾಡುತ್ತಾ ಒಂದು ಹಳ್ಳಿಯಲ್ಲಿರುವ ನೆಮ್ಮದಿಯ ಜೀವನವನ್ನು ಹಾಳು ಮಾಡಿ ಅದನ್ನು ಕಲಕಿದರು. ಅದು ಕೇವಲ ರಾಜಕೀಯಕ್ಕೋಸ್ಕರ ಮಾಡಿದ ಒಂದು ಸುಧಾರಣೆಯೇ ಹೊರತು ಜನಗಳಿಗೋಸ್ಕರ ಅನುಕೂಲ ಮಾಡಬೇಕೆಂದು ಮಾಡಿಲ್ಲ. ಆದರೆ ಇವತ್ತಿನ ದಿವಸ ನಮ್ಮ ಸರಕಾರ ಇದನ್ನು ಸರಿಪಡಿಸಿ ಸುವ್ಯವಸ್ಥಿತ ರೀತಿಯಲ್ಲಿ ಇದು ನಡೆದುಕೊಂಡು ಹೋಗತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ಚಿಂತನೆಯನ್ನು ಮಾಡಿದೆ ಇದಕ್ಕೆ ತಮ್ಮೆಲ್ಲರ ಬೆಂಬಲ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಸ್ನೇಹಿತರು ಈಗತಾನೆ ರೈತರ ಬಗ್ಗೆ ಪ್ರಸ್ತಾಪ ಮಾಡಿದರು, ಹಿಂದೆ ರೈತ ಸಂಘದ ಸದಸ್ಯರು ಬಹುಶಃ ರೇವಣ್ಣ–ಸಿದ್ದಪ್ಪನವರನ್ನು ಬಿಟ್ಟರೆ ಬೇರೆ ಯಾವರು ಇರಲಿಲ್ಲವೆಂದು ನನಗನ್ನಿಸುತ್ತಿದೆ. ಜನತಾ ಸರಕಾರ ರೈತ ಸಂಘದ ಚಳುವಳಿ ಮೂಲಕ ಅವರ ಬೆಂಬಲ ಪಡೆದು ಅಧಿಕಾರಕ್ಕೆ ಬಂದರು, ಬಂದ ಒಂದು ವರ್ಷದೊಳಗೆ ರೈತ ಸಂಘಟನೆ ಏನಾಯಿತು ರೈತ ಸಂಘದ ಸಮಸ್ಯೆ ಏನು ಇತ್ತು ಒಂದು ಸಂಘಟನೆ ಏನು ಇತ್ತು ಅದು ಎರಡಾಯಿತು ರೇವಣ್ಣ ಸಿದ್ದಪ್ಪನವರು ಒಂದು ಕಡೆ ಹೆಚ್. ಎಸ್. ರುದ್ರಪ್ಪನವರು ಮತ್ತೊಂದು ಕಡೆ ಆದರು. ಇದನ್ನು ನೋಡಿದ ಮೇಲೂ ನೀವು ಬಂದು ಅವರ ಜೊತೆ ಸೇರಿಕೊಂಡಿರಲ್ಲ ಎಂದು ನಮಗೆ ವ್ಯಥೆ ಯಾಗುತ್ತದೆ. ಎರಡು ಸಂಘಗಳ ಬೆಂಬಲ ಪಡೆದವರು ನಿಮ್ಮ ತಲೆಯ ಮೇಲೆ ಕೈ ಇಟ್ಟರು. ಆಗಲೇ ನೀವು ಅರ್ಥ ಮಾಡಿಕೊಳ್ಳಬೇಕಾಗಿತ್ತು. ೮೩—೮೪ ರಲ್ಲಿ ಬಿ. ಜೆ. ಪಿ. ಪಕ್ಷದವರು ಜನತಾ ಪಕ್ಷಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದ್ದರು.

ಶ್ರೀ ಬಾಬಾಗೌಡ ಪಾಟೀಲ್.—ನಮಗೆ ಪಕ್ಷ ಮುಖ್ಯವಲ್ಲ ರೈತರ ಚಿಂತನೆ ಮಾಡುವುದು ಮುಖ್ಯ.

ಶ್ರೀ ಜಿ. ಎಸ್. ಶಿವನಂಜಪ್ಪ.—ರೈತರ ಸಂಘಟನೆಯಾಗದಿದ್ದರೆ ಏನೂ ಮಾಡುವುದಕ್ಕೆ ಬರು ವುದಿಲ್ಲ. ಹಸಿರು ಶಾಲುಗಳನ್ನು ಹೊದ್ದುಕೊಂಡು ಬಸ್, ಕಾರ್‌ಗಳಲ್ಲಿ, ವ್ಯಾನ್‌ನಲ್ಲಿ ಬಹಳ ಜನ ರೈತರು ನಮ್ಮ ಮನೆ ಮುಂದೆ ಕೂಡ ಬಂದರು ನಾನು ಕೂಡ ನೋಡಿದೆ, ಆದರೆ ಅದಾದ ಒಂದು ವರ್ಷದೊಳಗೆ ನಿಮ್ಮ ಸಂಘ ನುಚ್ಚುನೂರಾಯಿತು ಅದನ್ನು ನೀವು ಅರ್ಥ ಮಾಡಿಕೊಳ್ಳಲಿಲ್ಲ. ಇವತ್ತು ಧಾರವಾಡ ಜಿಲ್ಲೆಯಲ್ಲಿ, ತುಮಕೂರು ಜಿಲ್ಲೆಯಲ್ಲಿ ಈ ಸಂಘ ನುಚ್ಚು ನೂರಾಗಿದೆ. ರೈತರ ಸಂಘಟನೆ ಬೇಕಾಗಿತ್ತು ಆದರೆ ನೀವೂ ಕೂಡ ಪಾರ್ಟಿ ಮಾಡಿಕೊಂಡು ಯಾವ ರೈತನೂ ಕೂಡ ಇವತ್ತು ಆ ಪಾರ್ಟಿಗೆ ಸೇರದ ರೀತಿಯಲ್ಲಿ ಆಗಿದೆ. ನೀವು ಸ್ವಲ್ಪ ಎಚ್ಚರಿಕೆಯಿಂದ ಇರಬೇಕಾಗಿತ್ತು ಆದರೆ ಅವರ

ಜೊತೆ ಸೇರಿಕೊಂಡರೆ. ಹತ್ತು ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿದರೂ ರೈತರ ಸಮಸ್ಯೆ ಬಗೆಹರಿದಂತಾಗುತ್ತದೆಯೇ ? ಇಷ್ಟು ಸಾಕೇ ?

(ಗೊಂದಲ)

ಶ್ರೀ ಬಾಬಾಗೌಡ ಪಾಟೀಲ್.—ಹತ್ತು ಸಾವಿರ ರೂಪಾಯಿಯ ಸಾಲವನ್ನು ಮನ್ನಾ ಮಾಡಿದರು...

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ರೈತರ ಸಾಲಗಳನ್ನು ಮನ್ನಾ ಮಾಡಿದರೆ ಇನ್ನು ನಿಮ್ಮದೇನೂ ಸಮಸ್ಯೆಯಿಲ್ಲವೇ ? ರೈತರ ಬೇಡಿಕೆ ಏನೂ ಇಲ್ಲವೇ ರೈತರ ಸಮಸ್ಯೆ ಇಲ್ಲಿಗೆ ಬಗೆಹರಿಯಿತೇ ?

ಶ್ರೀ ಬಾಬಾಗೌಡ ಪಾಟೀಲ್.—ಮೊದಲು ಇದು ಆಗಲಿ ನಂತರ ಬೇರೆ ಪ್ರಶ್ನೆ.

ಶ್ರೀ ಸಿದ್ದನಗೌಡ ಪಾಟೀಲ್ —ನೀವು ಹೇಳುವುದನ್ನು ಹೇಳಿ ಸಭಾನಾಯಕರು ಉತ್ತರ ಕೊಡುತ್ತಾರೆ ನೀವು ಉತ್ತರ ಕೊಡುವುದು ಬೇಡ.

ಶ್ರೀ ಜಿ. ಎಸ್. ಶಿವನಂಜಪ್ಪ —ಈ ಕಡೆ ಬಂದಿರತಕ್ಕಂತಹ ನೂರಕ್ಕೆ ೬೦ ಭಾಗ ಶಾಸಕರು ರೈತರಿದ್ದಾರೆ. ರೈತರ ಓಟು ತೆಗೆದುಕೊಂಡು ನಾವು ಬಂದಿರುವುದು. ೯೯ ಭಾಗ ರೈತರು ನನ್ನ ಕ್ಷೇತ್ರದಲ್ಲಿದ್ದಾರೆ ಅವರ ಓಟನ್ನು ತೆಗೆದುಕೊಂಡು ನಾನು ಬಂದಿದ್ದೇನೆ. ಅವರ ಪರಿಸ್ಥಿತಿ ಏನು ರೈತರ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕೆಂದು ಮೂಲಭೂತವಾಗಿ ವಿಚಾರ ಮಾಡಬೇಕಾಗುತ್ತದೆ. ಧಾರವಾಡ, ತುಮಕೂರು ಜಿಲ್ಲೆಯಲ್ಲಿ ಏನು ಇದೆ ಅದು ತಿಪಟೂರು ತಾಲ್ಲೂಕಿನಲ್ಲಿ, ತುರುವೇಕೆರೆ ತಾಲ್ಲೂಕಿನಲ್ಲಿ ಇಲ್ಲ. ಎಲ್ಲವನ್ನೂ ಒಂದು ಸಮ ಒಂದೇ ಆಧಾರದಲ್ಲಿ ಮಾಡಿಕೊಡುತ್ತೇವೆಂದು ಹೇಳಿದರೆ ನಾವು ರೈತರಿಗೆ ಮೋಸ ಮಾಡುತ್ತೇವೆಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಕೇವಲ ನಾವು ಮಾತ್ರ ಮಾತನಾಡುತ್ತೇವೆ ಕಾಂಗ್ರೆಸ್‌ನವರಿಗೆ ರೈತರ ಬಗ್ಗೆ ಕಳಕಳಿ ಇಲ್ಲ ಅನ್ನತಕ್ಕಂತಹ ಮಾತನ್ನು ವಿರೋಧ ಪಕ್ಷದ ಸದಸ್ಯರು ವ್ಯಕ್ತ ಮಾಡಬಾರದು. ನಿಮಗಿಂತ ಹೆಚ್ಚಿನ ಕಳಕಳಿ ನಮಗೆ ಇದೆ, ರೈತರ ವಿಶ್ವಾಸವನ್ನು ತೆಗೆದುಕೊಂಡು ನಾವು ಇಲ್ಲಿ ಬಂದಿದ್ದೇವೆ. ಇವತ್ತು ಹತ್ತು ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಬೇಕು ಎನ್ನುವುದು ಮೊದಲನೆಯದು. ಆ ಮೇಲೆ ಇಪ್ಪತ್ತೈದು ಸಾವಿರ, ಮೂವತ್ತು ಸಾವಿರ, ನಲವತ್ತು ಸಾವಿರ, ಆಮೇಲೆ ಒಂದು ಲಕ್ಷ ರೂಪಾಯಿ ಎಂದು ಹೇಳುತ್ತಾರೆ. ಈ ರೀತಿ ಸಾಲವನ್ನು ವಜಾ ಮಾಡಿದರೆ ರೈತರ ಸಮಸ್ಯೆ ಬಗೆಹರಿಯುತ್ತದೆಯೇ ? ಎನ್ನತಕ್ಕಂಥ ಒಂದು ದೊಡ್ಡ ಪ್ರಶ್ನೆಯನ್ನು ನಿಮ್ಮ ಮುಂದಿಡುತ್ತೇನೆ. ಮತ್ತು ನಿಜವಾಗಿ ಇರತಕ್ಕಂಥ ಸಮಸ್ಯೆಗಳ ಬಗ್ಗೆ...

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮ ಸಾಲ ಹತ್ತು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇದೆಯೇ ?

ಶ್ರೀ ಜಿ. ಎಸ್. ಶಿವನಂಜಪ್ಪ.—ನನ್ನದು ಸಾಲ ಇತ್ತು, ಅದನ್ನು ತೀರಿಸಿಬಿಟ್ಟಿದ್ದೇನೆ. ತಾವು ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು ಎಂದು ನಮ್ಮ ವಿರೋಧಪಕ್ಷದ ನಾಯಕರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಾ ರೈತರ ಸಮಸ್ಯೆ ಒಂದಲ್ಲ, ಎರಡಲ್ಲ, ಮೂರಲ್ಲ. ಇವತ್ತಿನ ದಿವಸ ಹಳ್ಳಿಗಾಡಿನಲ್ಲಿ ಇರತಕ್ಕಂಥ ರೈತನು ತನ್ನ ನೇಗಿಲನ್ನು ಸರಿ ಮಾಡಿಸಿಕೊಳ್ಳಬೇಕಾದರೆ ಎಷ್ಟು ದೂರ ಹೋಗಬೇಕಾಗಿದೆ, ಅವನ ಹೊಲದ ಕೆಲಸಕ್ಕೆ ಬರುವ ಉಪಕರಣಗಳನ್ನು ಸರಿಮಾಡಿಸಿಕೊಳ್ಳಬೇಕಾಗಿದ್ದರೆ ಎಷ್ಟು ದೂರ ಹೋಗಬೇಕಾಗಿದೆ, ಈ ರೀತಿಯಾದಂಥ ಎಲ್ಲಾ ಸಮಸ್ಯೆಗಳು ಇವೆ. ಅವನಿಗೆ ಇವತ್ತಿನ ದಿವಸ ಉಳುಮೆ ಮಾಡುವುದಕ್ಕೆ, ಬಿತ್ತನೆ ಮಾಡುವುದಕ್ಕೆ ಬೀಜ ಬೇಕು ಎಂದು ಹೇಳಿದರೆ ಎಲ್ಲಿ ಸಿಗುತ್ತದೆ, ಇದರ ಬಗ್ಗೆ ಹೆಚ್ಚಿನ ಒಂದು ಕಳಕಳಿಯನ್ನು ನಾವು ತೋರಿಸಿ ರೈತನ ಸಮಸ್ಯೆಯ ಬಗ್ಗೆ ವಿಶಾಲವಾಗಿ ಕೂಲಂಕುಷವಾಗಿ ಯಾವ ಯಾವ ಆಧಾರದ ಮೇಲೆ ಅವರ ಸಮಸ್ಯೆಗಳನ್ನು ಬಗೆಹರಿಸಬೇಕು ಎನ್ನತಕ್ಕಂಥ ವಿಚಾರವನ್ನು ಮಾಡಿದರೆ ನಿಜವಾಗಿಯೂ ಕೂಡಾ ನಾವು ರೈತನಿಗೆ ಉಪಕಾರ ಮಾಡಿದಂತಾಗುತ್ತದೆ. ಇಲ್ಲಿ ಕೇವಲ ಪ್ರಚಾರಕೋಸ್ಕರ ನಾವು ಇಲ್ಲಿ ರೈತನ ಬಗ್ಗೆ ಕೂಗು ಹಾಕಿದರೆ ಅದರಿಂದ ರೈತನ ಸಮಸ್ಯೆ ಬಗೆಹರಿಯಬಾರದು ಎಂಬ ವಿಚಾರವನ್ನು ಹೇಳುತ್ತಿದ್ದೇನೆ, ಸಣ್ಣ ರೈತರು, ಮಾರ್ಜಿನಲ್ ಫಾರ್ಮರ್ಸ್ ಅವನು ಏನು ಹಣ ಕಟ್ಟಬೇಕಾಗಿದೆಯೋ. ಎಷ್ಟು ಕಂತು ಹಣವನ್ನು ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟುಬಿಟ್ಟಿದ್ದಾರೆ. ಆದರೆ ಹತ್ತು ಸಾವಿರ ಇಪ್ಪತ್ತು ಸಾವಿರ, ಮೂವತ್ತು ಸಾವಿರ ನಲವತ್ತು ಸಾವಿರ, ಐವತ್ತು ಸಾವಿರ ಈ ರೀತಿ ತೆಗೆದುಕೊಂಡಿರುವವರು ಇವತ್ತಿನ ದಿವಸ ಡಿಫಾಲ್ಟರ್ ಆಗಿದ್ದಾರೆ. ಅವರಿಂದ ಏನು ಕಂತಿನ ರೂಪದಲ್ಲಿ ಸಾಲ ಬರಬೇಕಾಗಿದೆಯೋ ಅದು ಇವತ್ತಿನ ದಿವಸ ನಿಂತುಹೋಗಿದೆ. ನೀವು ಯಾರ ಪರವಾಗಿ ಹೋರಾಟ ಮಾಡುತ್ತಿದ್ದೀರಿ ?

೫-೦೦ ಪಿ. ಎಂ.

ಟ್ರ್ಯಾಕ್ಟರ್ ತೆಗೆದುಕೊಂಡು, ಈ ರೀತಿ ಸಾಲವನ್ನು ತೆಗೆದುಕೊಂಡು ಕಂತನ್ನು ಕೊಡದೇ ಇರತಕ್ಕಂಥವರ ಪರವಾಗಿ ನೀವು ಹೋರಾಟವನ್ನು ಮಾಡುತ್ತಿದ್ದೀರಾ. ಅಥವಾ ಎರಡು ಎಕರೆ, ಮೂರು ಎಕರೆ, ಜಮೀನನ್ನು ಇಟ್ಟುಕೊಂಡು ಕಷ್ಟಪಡುವ ರೈತರ ಕಂತನ್ನು ತೀರಿಸಿಕೊಂಡು ಬಂದಿರತಕ್ಕಂಥ ರೈತರ ಬಗ್ಗೆ ನೀವು ಹೋರಾಟ ಮಾಡುತ್ತೀರಾ ಎಂದು ನಾನು ಕೇಳಬೇಕಾಗುತ್ತದೆ. ಕೇವಲ ಸಾಲವನ್ನು ವಜಾ ಮಾಡಿದರೆ ಅವರ ಸಮಸ್ಯೆಗಳು ನಿಜವಾಗಿಯೂ ಬಗೆಹರಿದಂತೆ ಆಗುವುದಿಲ್ಲ. ಅವರಿಗೆ ಮೂಲಭೂತವಾದಂಥ ಸಮಸ್ಯೆಗಳು ಇವೆ. ಬೈರೇಗೌಡರ ಸಮಸ್ಯೆಯೂ ಗೊತ್ತಿದೆ. ಕೋಲಾರ ಜಿಲ್ಲೆಯಲ್ಲಿ ಮಳೆ ಬರುವುದಿಲ್ಲ. ಅವರಿಗೆ ನೀರನ್ನು ಕೊಡಬೇಕಾದರೆ ಏನು ಮಾಡಬೇಕು, ಅವರಿಗೆ ಯಾವ ರೀತಿ ಸಹಾಯವನ್ನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಆದ್ದರಿಂದ ನಾವು ರೈತನಿಗೆ ನೂರಕ್ಕೆ ೫೦ ಪರ್‌ಸೆಂಟ್ ಸಹಾಯವನ್ನು ಮಾಡುತ್ತೇವೆ ಎಂದು ಹೇಳಿದರೆ ಮುಖ್ಯವಾಗಿ ಅವರ ಭೂಮಿಗೆ ನೀರನ್ನು ಉಣ್ಣಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ನೀವೂ ಇಬ್ಬರೂ ಕೂಡಾ ಕುಳಿತುಕೊಂಡು ವಿಫುಲವಾದ ಚರ್ಚೆಯನ್ನು ಮಾಡಿದರೆ ರೈತನಿಗೆ ಸಹಾಯ ಮಾಡಿದಂತಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾಡಬೇಕು. ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಇದು ಇವತ್ತೇ ಆಗಿಬಿಡಬೇಕು, ಇವತ್ತೇ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಪ್ರಶ್ನೆ ಇದೆಯಲ್ಲಾ, ಇದು ಸರಿಯಲ್ಲ.

ಶ್ರೀ ಬಾಬಾಗೌಡ ಪಾಟೀಲ್.—ರೈತ ಅನ್ನ ಕೊಡತಕ್ಕಂಥವನು. ಅವನು ಅನ್ನವನ್ನು ಕೊಡುವುದರಿಂದ ನಾವೆಲ್ಲರೂ ಬದುಕಿದ್ದೇವೆ. ಅವನಿಗೆ ಸಹಾಯ ಮಾಡುತ್ತೇವೆ ಎಂದು ಏನು ಹೇಳುತ್ತೀರಿ, ಆ ಪದವನ್ನು ವಾಪಸ್ಸು ತೆಗೆದುಕೊಳ್ಳಿ. ರೈತನಿಗೆ ಯಾರೂ ಸಹಾಯ ಮಾಡುವುದು ಬೇಡ. ಅವನಿಂದ ಈ ದೇಶ ಬದುಕಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಯಡಿಯೂರಪ್ಪನವರಲ್ಲಿ ಈ ಸದನದ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹತ್ತು ಸಾವಿರ ರೂಪಾಯಿಗಳ ಸಾಲ ಯಾರ್‍ಯಾರು ಪಡೆದುಕೊಂಡಿದ್ದಾರೆ, ಅವರೆಲ್ಲರಿಗೂ ಈ ಸಾಲವನ್ನು ಕೊಡಿ ಎಂದು ಹೇಳುತ್ತೀರಾ ? ನಿಮಗೆ ಆ ರೀತಿ ಹೇಳುವುದಕ್ಕೆ ತಾಕತ್ತು ಇದೆಯೋ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರಾಜ್ಯದಲ್ಲಿ ರೈತನು ತನ್ನ ಹೊಲದಲ್ಲಿ ಕೆಲಸ ಮಾಡತಕ್ಕಂಥದ್ದು ಈ ದೇಶಕ್ಕೆ ಅನ್ನವನ್ನು ಕೊಡುವುದಕ್ಕೋಸ್ಕರ. ಅವನು ಕೆಲಸ ಮಾಡುವುದೇನಾದರೂ ನಿಂತರೆ ಈ ದೇಶ ಉಳಿಯುವುದಿಲ್ಲ. ಈ ರೈತ ಬೆಳೆಯನ್ನು ಬೆಳೆಯುತ್ತಿರುವುದು ದೇಶದ ಹಿತದೃಷ್ಟಿಯಿಂದ. ಈ ದೇಶದ ಜನ ಬದುಕಿರುವುದು ಕೂಡಾ ರೈತರಿಂದಲೇ.

ಶ್ರೀ ಜಿ. ಎಸ್. ಶಿವನಂಜಪ್ಪ.—ಇಲ್ಲಿ ರೈತರ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. "ಅನ್ನದಾತೋ ಸುಖೀನೋಭವ"

ಈ ಒಂದು ತತ್ವವನ್ನು ಮಾಡಿ, ರೈತ ಅನ್ನ ಕೊಡುತ್ತಿದ್ದಾನೆಲ್ಲ ಅವನಿಗೆ ಏನಾದರೂ ಒಳ್ಳೆಯದು ಮಾಡಬೇಕೆಂಬ ದೃಷ್ಟಿಯಿಂದ ಆತನ ಸಮಸ್ಯೆಯನ್ನು ಪರಿಹಾರ ಮಾಡತಕ್ಕ ಪ್ರಯತ್ನ ಮಾಡಬೇಕು.

ಶ್ರೀ ಬಾಬಾಗೌಡ ಪಾಟೀಲ್.—ರೈತನಿಗೆ ಸಹಾಯ ಬೇಕಾಗಿಲ್ಲ. ಮೋಸ ನಡೆದಿದೆ. ಅವರಿಗೆ ಮೋಸ ಮಾಡಬಾರದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಹೊಸ ಸದಸ್ಯರು ಇದ್ದಾರೆ. ಅವರಿಗೆ ತಿಳಿಯ ಹೇಳಬೇಕು. ನಮಗೆ ರಕ್ಷಣೆ ಬೇಕು, ಬೇರೆಯವರು ಮಾತನಾಡುವಾಗ ಪದೇ ಪದೇ ಎದ್ದು ನಿಲ್ಲುತ್ತಾರೆ. ಇದು ಚರ್ಚಾ ಕೂಟ ಅಲ್ಲ, ಸರ್ಕಾರದ ನಿಲುವು ರೈತರ ಪರವಾಗಿ ಇದೆ. ಮಾನ್ಯ ಸದಸ್ಯರು ಇದರ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ರೈತರ ಬಗ್ಗೆ ಚಿಂತನೆ ಮಾಡುತ್ತೇವೆಂದು ನಮ್ಮ ರಾಜ್ಯಪಾಲರ ಮೂಲಕ ಹೇಳಿಸಿದ್ದೇವೆ. ದಯವಿಟ್ಟು ಸ್ವಲ್ಪ ಯೋಚನೆ ಮಾಡಿ. ಟೈಮ್ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ವಿಚಾರದಲ್ಲಿ ರಾತ್ರಿ ಮನೆಗೆ ಹೋಗಿ ರೈತರ ಬಗ್ಗೆ ಇರತಕ್ಕ ವಿಚಾರಗಳನ್ನು ಹುಡುಕಿ.

ಶ್ರೀ ಸಿ. ಬೈರೇಗೌಡ.—ಅವರು ರಾಜ್ಯಪಾಲರ ಭಾಷಣ ಓದಿಲ್ಲ, ಭಾಷಣ ಮಾಡುತ್ತಿದ್ದಾರೆ, ಒಂದು ಪದವನ್ನಾದರೂ ರೈತರ ಬಗೆ ರಾಜ್ಯಪಾಲರ ಭಾಷಣದಲ್ಲಿ ತೋರಿಸಲಿ, ನಾನು ಉಪಕೃತನಾಗಿರುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಪ್ರತಿವರ್ಷ ನೀವು ರಾಜ್ಯಪಾಲರ ಭಾಷಣದಲ್ಲಿ ಬರೆಸಿದ್ದಿರಲ್ಲ, ಏನು ಮಾಡಿದಿರಿ. ನಾವು ಬರೆದಿಲ್ಲ ಮಾಡುತ್ತೇವೆ. ನೀವು ಬರೆದೂ ಮಾಡಲಿಲ್ಲ.

ಶ್ರೀ ಸಿ. ಬೈರೇಗೌಡ.—ಅದಕ್ಕೋಸ್ಕರವಾಗಿ ನಾವು ಅಧಿಕಾರ ಕಳೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಯಾವ ಯೋಜನೆಯನ್ನೂ ರೈತರ ಬಗ್ಗೆ ಹಾಕಿಲ್ಲ ಎಂದರೆ ಏಕೆ ಕೋಪ. ರೈತರ ಬಗ್ಗೆ ನಿಮಗೆ ಅನುಕಂಪ ಇದೆಯೇ?

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ನಾಲ್ಕು ಮತ್ತು ೫ನೇ ಪೇಜಿನಲ್ಲಿ ಇದರ ಬಗ್ಗೆ ಪ್ರಸ್ತಾಪ ಇದೆ. ಇದನ್ನು ತಾವು ಓದಿದರೆ ಅರ್ಥವಾಗುತ್ತದೆ,

ಶ್ರೀ ಬಸವರಾಜ ರಾಯರೆಡ್ಡಿ.—ರಾಜ್ಯಪಾಲರ ಮುಖಾಂತರ ಹೇಳಿಸಿದ್ದೇವೆ ಎನ್ನುವುದು ಗೌರವದ ಮಾತಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ.—ಹಳ್ಳಿಗಾಡಿನ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ವಿಚಾರದಲ್ಲಿ ಗವರ್ನರ್ ಅವರು ಹೇಳಿದ್ದಾರೆ. ಹಳ್ಳಿಗಾಡಿನಲ್ಲಿರುವವರು ಯಾರು ಶಾಪ್ ಇಟ್ಟು ಕೊಂಡಿದ್ದಾರೆ, ಯಾರು ಇಂಡಸ್ಟ್ರಿಯಲಿಸ್ಟ್ ಇದ್ದಾರೆ, ಅವರ ಬಗ್ಗೆ ಅಲ್ಲ. ಹಳ್ಳಿಗಾಡಿನಲ್ಲಿ ನೂರಕ್ಕೆ ಎಂಭತ್ತರಷ್ಟು ರೈತರು ಇದ್ದಾರಲ್ಲ. ರೈತ ಕಾರ್ಮಿಕರು ಇದ್ದಾರಲ್ಲ ಅವರ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳಿದರೆ, ರೈತರ ಬಗ್ಗೆ ಏನೂ ಹೇಳಲಿಲ್ಲ ಎಂದರೆ ಏನು ಅರ್ಥ ರೈತರಿಗೆ ನೀರು ಕೊಡುವುದಕ್ಕೆ ಆದ್ಯತೆಯನ್ನು ಜಾಸ್ತಿ ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಕರೆಂಟ್ ಕೊಡಬೇಕೆಂಬ ಬಗ್ಗೆ ಏನೇನು ಮಾಡಬೇಕು ಅದರ ಬಗ್ಗೆ ಹೇಳಿದ್ದೇವೆ...

ಶ್ರೀ ಬಸವರಾಜ ರಾಯ ರೆಡ್ಡಿ.—ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಯಾವುದರ ಬಗ್ಗೆ

ಶ್ರೀ ಬಸವರಾಜ ರಾಯ ರೆಡ್ಡಿ.—ಅವರು ಹಿರಿಯ ಸದಸ್ಯರು ಇದ್ದಾರೆ, ಹೊಸಬರಲ್ಲ ಈಗಾಗಲೇ ನಮ್ಮ ಜೊತೆ ಇದ್ದವರು. ಅವರು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಾ ರಾಜ್ಯಪಾಲರ ಮುಖಾಂತರ ಹೇಳಿಸಿದ್ದೇವೆ, ರಾಜ್ಯಪಾಲರ ಮುಖಾಂತರ ಹೇಳಿಸಿದ್ದೇವೆ ಎಂಬ ಮಾತನ್ನು ಪದೇ ಪದೇ ಹೇಳಿದ್ದಾರೆ. He cann't dictate to the Governor- The Governor is above all. ದಯವಿಟ್ಟು ಆ ಮಾತನ್ನು ಬಳಸಬೇಡಿ ಎಂದು ಹೇಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಆಹಾರ ಧಾನ್ಯಗಳು, ಸುಲಭವಾಗಿ ಎರಡು ರೂಪಾಯಿಗಳಿಗೆ ಕೆ.ಜಿ.ಯ ತರಹ ಮಾಡುತ್ತೇವೆಂದು ಅವರು ಹೇಳಿದ್ದರು. ನಾವೆಲ್ಲಾ ಸ್ವಾಗತ ಮಾಡಿದ್ದೇವೆ. ಇವೊತ್ತಿನ ದಿವಸ ಆ ಕಡೆ ೨೦ ರಿಂದ ೩೦ ಜನ ಸದಸ್ಯರು ಇರಬಹುದು. ಅವರೆಲ್ಲರಿಗೂ ಸಹ ಹಸಿರು ಕಾರ್ಡ್ ವಿತರಣೆಯಲ್ಲಿ ಮೋಸ ನಡೆದಿದೆ ಎಂದು ಗೊತ್ತಾಗಿದೆ. ಚುನಾವಣೆಗೆ ಅವರುಗಳು ಹೋದಾಗ ಪ್ರತಿಯೊಂದು ಊರಿನಲ್ಲಿ ಕೂಡ ಎಲ್ಲರ ಕಂಪ್ಲೈಂಟ್ ಏನೆಂದು ಗೊತ್ತಿದೆ. ಈ ವಿಚಾರ ಹೇಳಿದರೆ ತಪ್ಪಾಗಲಾರದು. ಅದನ್ನು ಅವರು ಒಪ್ಪಿಕೊಳ್ಳುತ್ತಾರೆಂದು ಭಾವಿಸಿದ್ದೇನೆ. ಇದನ್ನು ಸರಿಪಡಿಸಬೇಕು ಎನ್ನುವ ವಿಚಾರವನ್ನು ಗವರ್ನರ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದನ್ನು ಮಾನ್ಯ ಸದಸ್ಯರುಗಳು ಒಪ್ಪುತ್ತಾರೆಂದು, ಆಸೆಯನ್ನು ನಾನು ವ್ಯಕ್ತಪಡಿಸುತ್ತೇನೆ. ೧೯೮೩ ರಿಂದ ೧೯೮೯ರವರೆಗೆ ಎಷ್ಟೋ ಅವ್ಯವಹಾರಗಳನ್ನು ಮಾಡಿದ್ದೀರಿ. ತಾಳೆ ಎಣ್ಣೆಯನ್ನು ಬೇರೆ ಕಡೆಯಿಂದ ತರಿಸಿಕೊಂಡು ಇದರಲ್ಲಿ ೮೦ ಕೋಟಿ ರೂಪಾಯಿಗಳ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಇದರ ಬಗ್ಗೆ ಚಕಾರ ಶಬ್ದ ಎತ್ತಲಿಲ್ಲ ಎನ್‌ಕ್ವೈರಿ ಮಾಡಿಸುತ್ತೇವೆಂದು ಆಶ್ವಾಸನೆ ಕೊಟ್ಟರೂ ಅದು ಈಡೇರಲಿಲ್ಲ. ಇಡೀ ಕರ್ನಾಟಕದಲ್ಲಿ ೪–೫ ವರ್ಷಗಳಲ್ಲಿ ೮೦ ಕೋಟಿ ರೂಪಾಯಿಗಳ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ನಾನು ಇದನ್ನು ಹೇಳುವಾಗ ಬಹಳ ಜವಾಬ್ದಾರಿಯುತವಾಗಿ ಹೇಳಿದ್ದೆ. ಇದರ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ೧೭೧ ಕಾರ್ಡ್ ಎಫ್.ಪಿ.ಡಿ. ಓನರ್ ಅವರಿಗೆ ೨೫ ಸಾವಿರ ಲೀಟರ್ ಎಣ್ಣೆ ಕೊಟ್ಟಿದ್ದೀರಿ. ಒಂದು ವರ್ಷಕ್ಕೆ ಒಂದು ಕಾರ್ಡಿಗೆ ೧೦ ಸಾವಿರ ಲೀಟರ್ ಎಣ್ಣೆಯನ್ನು ನಮ್ಮ ರೈತ ತಿಂದುಬಿಡುತ್ತಾನೆಯೇ. ಇದರ ಬಗ್ಗೆ ನೀವು ಹೆಚ್ಚಿನ ಗಮನ ಏಕೆ ಕೊಡಲಿಲ್ಲ? ಆಹಾರದ ವಿತರಣೆ ಸರಿಯಾಗಿ ಆಗಲಿಲ್ಲ. ಹಸಿರು ಕಾರ್ಡು ವಿತರಣೆ ಸರಿಯಾಗಿ ಆಗಲಿಲ್ಲ. ಅನ್ನ ಊಟ ಮಾಡುವವನಿಗೆ ಅನ್ನ ಬೇಕು. ಮೂರು ಎಕರೆ ಜಮೀನು ಇದ್ದವನಿಗೆ, ನಾಲ್ಕು ಎಕರೆ ಜಮೀನು ಇದ್ದವನಿಗೆ ಹಸಿರು

ಕಾರ್ಡ್ ಕೊಡಿ ಅಂದರೆ ಅನ್ಯಾಯವಾಗುತ್ತದೆ. ಆದುದರಿಂದ ಆಹಾರ ಮತ್ತು ಹಸಿರು ಕಾರ್ಡ್‌ಗಳ ವಿತರಣೆ ಸರಿಯಾದ ರೀತಿಯಲ್ಲಿ ಮಾಡುವ ಬಗ್ಗೆ ಒತ್ತು ಕೊಟ್ಟು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಅನ್ನ ನಿಮಗೂ ಬೇಕು, ನಮಗೂ ಬೇಕು, ಕಾಂಗ್ರೆಸ್‌ನವರಿಗೂ ಬೇಕು, ಜನತಾದವರಿಗೂ ಬೇಕು, ಅಧ್ಯಕ್ಷರಿಗೂ ಬೇಕು, ಅಧಿಕಾರಿಗಳಿಗೂ ಬೇಕು, ಬಡವನಿಗೂ ಬೇಕು, ಬಲ್ಲಿದವನಿಗೂ ಬೇಕು. ಆದ್ದರಿಂದ ಅನ್ನವನ್ನು ವಿತರಣೆ ಮಾಡುವಾಗ ಸರಿಯಾದ ಕ್ರಮವನ್ನು ಅನುಸರಿಸಿ ವಿತರಣೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಿದರೆ ಇದಕ್ಕಿಂತ ದೊಡ್ಡ ಉಪಯೋಗ ರಾಜ್ಯಕ್ಕೆ ಮಾಡಿದ ಹಾಗೆ ಆಗಲಿಲ್ಲ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ವಿದ್ಯುಚ್ಛಕ್ತಿ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಿಮ್ಮೆಲ್ಲರಿಗೂ, ಸದನಕ್ಕೂ ಗೊತ್ತಿದೆ. ಇವತ್ತಿನ ದಿವಸ ಐ.ಪಿ. ಸೆಟ್ಟುಗಳು ಎಷ್ಟು ನಡೆಯುತ್ತಿವೆ. ಎಷ್ಟು ಪಂಪುಗಳು (ಮೋಟಾರುಗಳು) ದಿವಸಕ್ಕೆ ಸುಡುತ್ತಿವೆ ಎಂದು ಲೆಕ್ಕ ಹಾಕಿದರೆ ನಿಜವಾಗಿಯೂ ರೈತ ಸಮುದಾಯಕ್ಕೆ ಅನ್ಯಾಯವಾಗುತ್ತಾ ಇದೆ, ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಹಿಂದೆ ನಾನು ಒಂದು ಸಲಹೆ ಮಾಡಿದ್ದೆ. ಸೂರ್ಯನ ಕಿರಣಗಳಿಂದ ನೀರು ಕಾಯಿಸತಕ್ಕ ಯಂತ್ರಗಳನ್ನು ಬೆಂಗಳೂರು ನಗರದ ಎಚ್‌ಎಚ್ ಮನೆಗಳಿಗೆ ಅಳವಡಿಸಿದರೆ ಇಲ್ಲಿ ಕರೆಂಟಿನ ಉಪಯೋಗ ಕಡಿಮೆಯಾಗಿ ಬೇಸಿಗೆಯಲ್ಲಿ ರೈತನಿಗೆ ಏನು ಕರೆಂಟ್ ಬೇಕಾಗುತ್ತದೆ ಅದನ್ನು ಸುಲಭವಾಗಿ ಒದಗಿಸಬಹುದು. ಇದನ್ನು ನಾನು ಸಲಹೆ ಮಾಡಿದ್ದೆ. ಇದರ ಕಡೆ ಅವರು ಹೆಚ್ಚಿಗೆ ಗಮನ ಕೊಡಲಿಲ್ಲ. ಕೇವಲ ರಾಜಕೀಯ ಮಾಡಿಕೊಂಡು ೭ ವರ್ಷಗಳ ಕಾಲ ಕಳೆದು ಈಗ ಒಂದೇ ದಿವಸಕ್ಕೆ ತೀರ್ಮಾನ ಕೊಡಬೇಕು ಅಂದರೆ ! ಹೇಗೆ. ಶ್ರೀಮಾನ್ ಯಡಿಯೂರಪ್ಪನವರೂ ಇದರಲ್ಲಿ ಭಾಗಿಯಾಗಿದ್ದಾರೆ. ೧೯೮೩ ರಿಂದ ೧೯೮೫ರ ತನಕ ಅವರೂ ಕೂಡ ಸಹಕಾರ ಕೊಟ್ಟರು. ಆದ್ದರಿಂದ ಮಾನ್ಯ ಯಡಿಯೂರಪ್ಪನವರೂ ನಮ್ಮನ್ನು ದೂಷಣೆ ಮಾಡುವ ಹಾಗಿಲ್ಲ, ಬೆಟ್ಟು ಮಾಡಿ ತೋರಿಸುವ ಹಾಗಿಲ್ಲ. ವಾತಾಪಿ ಜೀರ್ಣೋದ್ಭವ ಎಂದ ಹಾಗೆ ಅವರು ನಿಮ್ಮನ್ನು ಜೀರ್ಣಮಾಡಿಕೊಂಡರೋ ಏನೋ ಅವರಿಗೇ ಗೊತ್ತು. ಆದರೆ ನಮ್ಮನ್ನು ದೂಷಣೆ ಮಾಡಬೇಕಾಗಿಲ್ಲ. ಜನತೆಯ ಕಷ್ಟಸುಖಗಳನ್ನು ಪರಿಹಾರ ಮಾಡಲಿಕ್ಕೆ ಮಾರ್ಗಗಳನ್ನು ಕಂಡುಹಿಡಿಯಬೇಕು. ಇದಕ್ಕಾಗಿ ವಿದ್ಯುತ್ತನ್ನು ಒದಗಿಸಿಕೊಡತಕ್ಕಂಥ ವಿಚಾರವನ್ನು ಸರ್ಕಾರದವರು ಹೇಳಿದ್ದಾರೆ. ದಯವಿಟ್ಟು ಈ ವಿಚಾರದಲ್ಲಿ ನೀವೂ ಕೂಡ ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಅಭಿನಂದನೆಯನ್ನು ಸಲ್ಲಿಸಿದ್ದಾರೆ ಅದನ್ನು ಸಮರ್ಥಿಸುತ್ತಾ, ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ ಇದ್ದೇನೆ.